Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೨೮ | ಕಾರೀಕು ೧೭-೩-೧೯೫೦ನೇ ಶುಕ್ರವಾರ | ಸಂಚಿಕೆ ೪೨

ಸ್ವಪ್ನ - ಒಂದು ವಿವೇಚನೆ.

ಲೇ:- "ಗುಪ್ತ"

ಸ್ವಪ್ನ ಕಾಣುವ ಹಕ್ಕು ಯಾ ಸೌಭಾಗ್ಯ ನಮಗಿಲ್ಲದಿರುತ್ತಿದ್ದರೆ ನಮ್ಮ ಜೀವನ ಹೇಗಾಗುತಿತ್ತೊ ಕಲ್ಪನೆ ಮಾಡಲು ಸಾಧ್ಯವಿಲ್ಲ. ಮುಂದಿನ ಭವಿಷ್ಯವನ್ನು ನೆನೆದು ಹಾಗಾಗಬೇಕು, ಹೀಗಾಗಬೇಕೆಂದು ಕನಸು ಕಾಣುವುದು ಎಷ್ಟು ರುಚಿಕರ! ಪ್ರತಿಯೊಬ್ಬನೂ ಸ್ವಪ್ನ ಕಾಣುತ್ತಾನೆ. ಕೆಲವರದು ಭವಿಷ್ಯದ ಕನಸುಗಳು. ಕೆಲವರದು ಹಗಲು ಕನಸುಗಳು. ಕನಸು ಅದಾವ ವರ್ಗಕ್ಕೆ ಸೇರಿದ್ದರೂ ಅದು ವಿಚಿತ್ರ ಸವಿಯಿಂದ ಕೂಡಿದುದು. ನಿದ್ರೆಯಲ್ಲಿ ಪ್ರತಿಯೊಬ್ಬನಿಗೂ ಸ್ವಪ್ನ ಬೀಳುತ್ತದೆ. ಎಚ್ಚರವಾದಾಗ ಕೆಲವರು ಅದನ್ನು ಜ್ಞಾಪಿಸಿಕೊಳ್ಳುವರು. ಕೆಲವರು ಸರ್ವವನ್ನೂ ಮರೆತು ತಮಗೆ ಸ್ವಪ್ನವೇ ಬೀಳುವದಿಲ್ಲವೆನ್ನುವರು! ಈ ಸ್ವಪ್ನಗಳನ್ನು ಸದುಪಯೋಗಗೊಳಿಸಬಹುದೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು. ಈ ರಾತ್ರಿ ಸ್ವಪ್ನದ ವಿಚಾರ ಸ್ವಲ್ಪ ವಿವೇಚಿಸುವ.

ಸ್ವಪ್ನದ ವಿಚಾರ ಅನೇಕರು ಅನೇಕ ಗ್ರಂಥಗಳನ್ನು ಬರೆದಿದ್ದರೂ ಆದರ ನಿಜವಾದ ವಿವೇಚನೆ ಶಾಸ್ತ್ರೀಯ ರೀತಿಯಿಂದ ಬಹು ಜನರಿಗೆ ತಿಳಿದಿರಲಾರದು. ಈಗಲೂ ಕೂಡ ಸ್ವಪ್ನದಲ್ಲಿ ಬೆಕ್ಕನ್ನು ಕಂಡರೆ ಜಗಳವಾಗುವದು, ಮುತ್ತುಗಳನ್ನು ಕಂಡರೆ ಅಳಬೇಕಾಗುವದು. ಹಲ್ಲು ಕಿತ್ತದ್ದು ಕಂಡರೆ ಮರಣ ಸಂಭವ ಎಂಬ ಮೂಢನಂಬಿಕೆ ಹಲವರಲ್ಲಿ ಇದೆ. ಈ ಸ್ವಪ್ನಗಳನ್ನು ಶಾಸ್ತ್ರೀಯ ರೀತಿಯಿಂದ ವಿಶ್ಲೇಷಣ ಮಾಡಿದರೆ ಅವು ಅನುಭವ ಶರಧಿಗಳಂತಾಗಿ ಮನುಷ್ಯನಿಗೆ ಬಹು ಹಿತವನ್ನು ಮಾಡುವವೆಂದು ಹೇಳಿದರೆ ಬಹು ಜನರು ನಂಬಲಿಕ್ಕಿಲ್ಲ.

ಇತ್ತಿತ್ತಲಾಗಿ ಅಂದರೆ ನಾಗರೀಕತೆ ಬೆಳೆಯುತ್ತಾ ಬಂದ ಹಾಗೆ ವಿವಿಧ ಕ್ಷೇತ್ರಗಳ ಪ್ರಗತಿಯಂತೆ ಸ್ವಪ್ನ ರಾಜ್ಯದಲ್ಲಿ ಯೂ ಅನ್ವೇಶಣೆ ನಡೆಯಿತು. ಅನೇಕ ಮನೋವಿಜ್ಞಾನಿಗಳು ಪರಿಶೀಲಿಸಿ ಸ್ವಪ್ನಗಳು ಯಾವದೇ ಭವಿಷ್ಯ ಘಟನೆಯ ಸಂಕೇತಗಳಲ್ಲವೆಂದೂ ಅವುಗಳಿಂದ ಸ್ವಪ್ನ ಕಾಣುವವನ ಮೇಲೆ ಯಾವದೇ ಕೆಡುಕು ಯೂ ಹಿತವಾಗುವ ಸಾಧ್ಯತೆ ಇಲ್ಲವೆಂದೂ ಕಂಡು ಹಿಡಿದಿರುವರು. ಆದರೂ ಕೂಡ ಹಳೆಯ ಸಂಪ್ರದಾಯ ಸಾಯುವದು ನಿಧಾನವೆಂಬಂತೆ ಹಿಂದಿನ ಮೂಢ ನಂಬಿಕೆ, ಕಲ್ಪನೆಗಳು ಇನ್ನೂ ಸಾಗಿ ಬರುತ್ತಿವೆ. ಫಾರೋವಾ ಎಂಬ ಅರಸರು ಧಾನ್ಯದ ಮತ್ತು ಧನಗಳ ಸ್ವಪ್ನ ಕಂಡರಂತೆ ಅದರ ಅರ್ಥವನ್ನು ವಿವರಿಸಿ ಪಂಡಿತರೊಬ್ಬರು ಏಳು ವರ್ಷಗಳ ಸಂಪತ್ ಸಮೃದ್ಧಿಯೂ, ನಂತರ ಏಳು ವರ್ಷಗಳ ಬರಗಾಲವು ದೇಶದಲ್ಲಾಗುವದೆಂದೂ ಸ್ವಪ್ನದ ಮೂಲಕ ಈ ಎಚ್ಚರಿಕೆಯನ್ನು ದೇವರು ಕೊಟ್ಟದೆಂದೂ ಹೇಳಿದರಂತೆ! ಅದೇ ರೀತಿಯ ಕಾಲ್ಪನಿಕ ಕಥೆ ಇಂದೂ ನಡೆಯುತ್ತದೆ.

ಸ್ವಪ್ನದಲ್ಲಿ ದೇವರ ಕೈಯಾಗಲೀ, ಯಾವದೇ ಮುಂಬರುವ ಘಟನೆಯ ಪೂರ್ವ ಸೂಚನೆಯಾಗಲೀ ಇಲ್ಲ. ಅವು ಸ್ವಪ್ನ ಕಾಣುವ ಮನುಷ್ಯನ ಅಭಿಲಾಷೆಯಂತೆ ತೋರುವವು. ಶರೀರಕ್ಕೆ ನೀರಿನ ಅವಶ್ಯಕತೆ ಇದ್ದಾಗ ನೀರು ಕುಡಿದಂತೆ ಸ್ವಪ್ನ ಕಾಣಬಹುದು. ಪರೀಕ್ಷೆ ಯಾ ಇನ್ನಾವುದಾದರೂ ಭಯದ ಕಾರಣವಿದ್ದಾಗ ಅವುಗಳಿಗೆ ಸಂಬಂಧಿಸಿ ಸ್ವಪ್ನ ಕಾಣಬಹುದು. ಸ್ವಪ್ನಗಳು ಮನುಷ್ಯನ ಮನಸ್ಸಿನ ಕಲ್ಪನೆಯ ತಳಹದಿಯ ಮೇಲೆ ನಿಂತವುಗಳಾಗಿ ಸ್ವಪ್ನಗಳ ಸಹಾಯದಿಂದ ಮನುಷ್ಯನ ಮನಸ್ಸಿನಲ್ಲಿರುವ ತಳಮಳವನ್ನು ಗುರ್ತಿಸುವ ಸಾಧ್ಯತೆ ತೋರಿ ಬರುತ್ತಿದೆ. ನಮ್ಮ ನೈಸರ್ಗಿಕ ಜೀವನದಲ್ಲಿ ತೃಪ್ತಿಯನ್ನು ಪಡೆಯದ ನಿಜಾಂಗಳು ಸ್ವಪ್ನದಲ್ಲಿ ಕಾಣಿಸಿಕೊಳ್ಳುವವು.

ಪ್ರೇಮ ಯಾ ಕಾಮ ಇವುಗಳು ಪೂರ್ಣ ತೃಪ್ತವಾಗದ ವಸ್ತುಗಳು. ಆದ ಕಾರಣವೇ ಹೆಚ್ಚು ಜನರು ಇವುಗಳ ವಿಚಾರವೇ ಸ್ವಪ್ನ ಕಾಣುವರು! ಇದರಿಂದ ಯಾರೂ ಗಾಬರಿಗೊಳ್ಳಬೇಕಾಗಿಲ್ಲ. ಅತೃಪ್ತ ಅಭಿಲಾಷೆಯೇ ಸ್ವಪ್ನದಲ್ಲಿ ಮೂಡುವದೆಂದು ಯಾರೂ ಭಾವಿಸಲಾಗದು. ಅಭಿಲಾಷೆ ಇರುವುದೊಂದಾದರೆ ಅದಕ್ಕೆ ವಿರುದ್ಧವಾಗಿಯೂ ಸ್ವಪ್ನ ಕಾಣಬಹುದು. ಈ ಸ್ವಪ್ನಗಳಲ್ಲಿ ಒಂಪು ವ್ಯವಸ್ಥೆಯಿಲ್ಲ. ಒಂದೇ ವಯಸ್ಸಿನ ಜನರು ಒಂದೇ ರೀತಿಯ ಸ್ವಪ್ನ ಕಾಣುವರೆಂದೂ ಹೇಳಲಾಗುವದಿಲ್ಲ. ಪ್ರೇಮ, ವ್ಯಾಪಾರ, ಪ್ರಯಾಣ, ಉದ್ಯೋಗ, ಕಾಯಿಲೆ ಮೊದಲಾದ ವ್ಯಕ್ತಿಗೆ ಆ ಸಮಯಕ್ಕೆ ಪ್ರಾಮುಖ್ಯವಾದ ವಿಚಾರಗಳಲ್ಲಿ ಅತನಿಗೆ ಸ್ವಪ್ನ ಬೀಳಬಹುದು. ಇವುಗಳನ್ನು ಕಾಣುವ ವಿಧಾನವಾದರೂ ವಿಚಿತ್ರವಾಗಿರಬಹುದು. ಆದರೆ ಈ ಸ್ವಪ್ನಗಳಲ್ಲಿ ಅಭಿಲಾಷೆಯ ರೂಪ ರೇಖೆ ಇದ್ದೇ ಇರುವದು. ಆಕಾಶದಲ್ಲಿ ಹಾರಿದಂತೆ, ನೀರಿನಲ್ಲಿ ಮುಳುಗಿದಂತೆ, ಭೂಮಿಯೊಳಗೆ ಪ್ರವೇಶಿಸಿದಂತೆ ಸ್ವಪ್ನಗಳಾಗಬಹುದು! ಹಿಂದೆ ತಿಳಿದಿದ್ದ ಯಾ ಕಂಡ ವ್ಯಕ್ತಿಗಳ ಬಗ್ಗೆ ಮಾತ್ರ ಸ್ವಪ್ನವೆನ್ನಲಾಗುವದಿಲ್ಲ. ಎಂದೂ ಕಾಣದ ಕಲ್ಪನೆಗೆ ಮೀರಿದ ವ್ಯಕ್ತಿಗಳನ್ನೂ ಸ್ವಪ್ನದಲ್ಲಿ ಕಾಣಬಹುದು. ನಾಯಿಯು ಮಾತಾಡಿದಂತೆ, ನನಗೆ ತಿಳಿಯದ ಭಾಷೆಯಲ್ಲಿ ನಾವುಮಾತಾಡುತ್ತಿರುವಂತೆತೋರಬಹುದು. ಈ ರೀತಿಯ ವಿವಿಧ ಸ್ವಪ್ನಗಳನ್ನು ಪ್ರತಿಯೊಬ್ಬನೂ ಕಾಣುವನೆಂಬುದನ್ನು ವಿದ್ಯುತ್ ವಿಧಾನಗಳಿಂದ ವಿಜ್ಞಾನಿಗಳುಪರಿಶೋಧಿಸಿದ್ದಾರೆ. ಪ್ರತಿ ಸ್ವಪ್ನಕ್ಕೂ ಭಾವೋತ್ತೇಜಕ ಹಿನ್ನೆಲೆಬೇಕು. ಈ ಭಾವೋತ್ತೇಜವು ಪ್ರಖರವಾಗಿದ್ದಷ್ಟೂ ಅಗಾಗ್ಯೆ ಸ್ವಪ್ನ ಬೀಳಬಹುದು.

ಪ್ರತಿ ಸ್ವಪ್ನವೂ ಮಾನವನ ಸುಪ್ತ ಜೀವನದಲ್ಲಿ ಪರಿಪೂರ್ಣಗೊಳ್ಳದೆ ಹುದುಗಿರುವ ಅತೃಪ್ತ ಭಾವನೆಯು ಫಲವೆನ್ನಬಹುದು. ಚಿಕ್ಕ ಮಗುವಾಗಿದ್ದಾಗ ಅಡಗಿದ ಭಾವನೆಯು ವಯಸ್ಸಾದಾಗ ಸ್ವಪ್ನದಲ್ಲಿ ತೋರಬಹುದು. ಮನೋ ವಿಶ್ಲೇಷಣಾಚಾರ್ಯರೆಂದ ಸಿಗ್‌ಮಂಡ್ ಫ್ರಾಯ್ಡ್ ಎಂಬವರ ಅತೃಪ್ತ ಭಾವನೆಯು ಸೆಣಸಾಟವೇ ಸ್ವಪ್ನದ ಕಾರಣವೆಂದರು. ಆದರೆ ಇದೇ ಸ್ವಪ್ನದ ಪೂರ್ಣ ವಿವರಣೆಯಲ್ಲ. ಹಾಗಾದರೆ ಸ್ವಪ್ನದ ಉಗಮವೆಲ್ಲಿ?

ಮಾನವನ ವಿದ್ಯುಲ್ಲು ರಾತ್ರೆ ಮತ್ತು ಹಗಲು ಎಡೆಯಿಲ್ಲದೆ ಶರೀರದ ಇತರ ಕೆಲವು ಅವಯವಗಳಂತೆ ಕೆಲಸಮಾಡುತ್ತದೆ. ಮನುಷ್ಯನು ಪ್ರಾಮುಖ್ಯವಾಗಿ ಬಯಕೆಯ ಪ್ರಾಣಿ. ಚಿಕ್ಕಂದಿನಿಂದಲೇ ವಿವಿಧಯಾಂತರ ವಿಧದ ಆಶೆಗಳು ನಮ್ಮಲ್ಲಿರುತ್ತವೆ. ಇವುಗಳಲ್ಲಿ ಕೆಲವು ಕರಗತವಾಗಿ ಬಹುದಾದರೂ ಹಲವು ಸಾಮಾಜಿಕ, ನೈತಿಕ ಯಾ ಧಾರ್ಮಿಕ ಭಯದ ಕಾರಣ ಕರಗತವಾಗದೆ ಉಳಿಯುವವು. ಆ ಕಾರಣ ನಮ್ಮ ಮನಸ್ಸಿನ ಅನೇಕ ಬೇಡಿಕೆಗಳನ್ನು ಪ್ರಕಟಪಡಿಸದೆ ಒತ್ತಿ ಕೆಳಗೆ ತಳ್ಳಬೇಕಾಗುವದು. ತೃಪ್ತಿಗೊಳ್ಳದ ಈ ಬಯಕೆಗಳೇ ಸ್ವಪ್ನಗಳಿಗೆ ಕಾರಣವಾಗುವವು. ಈ ಬಯಕೆಗಳ ಪೂರ್ಣ ರೂಪವೇ ಸ್ವಪ್ನವಲ್ಲ. ನಮ್ಮ ಬಯಕೆಯಲ್ಲಿಲ್ಲದ ಅನೇಕ ವಿಚಿತ್ರ ಸಂಗತಿಗಳೂ ಸ್ವಪ್ನದಲ್ಲಿ ಪ್ರಕಟವಾಗುವವು!

ಶರೀರಕ್ಕೆ ಅತ್ಯಾವಶ್ಯವಾದ ನಿದ್ರಾಭಂಗವಾಗದಂತೆ ಅದನ್ನು ಸಂರಕ್ಷಿಸಲು ಪ್ರಕೃತಿಯು ಮಾಡಿದ ವಿಚಿತ್ರ ಏರ್ಪಾಡಿನಂತೆ ನಮ್ಮ ಸ್ವಪ್ನಗಳಲ್ಲಿ ಸಂಕೇತಗಳಿಂದ ಸಾಗುವವೂ ಇನೆ. ಆದ್ದರಿಂದ ಸ್ವಪ್ನ ಕಾಣುವವನು ಅದನ್ನು ತಕ್ಷಣ ವಿಮರ್ಶಿಸಿ ಅರ್ಥಮಾಡಿಕೊಳ್ಳಲಾರನು. ಅದರೂ ನಮ್ಮ ಸ್ಮೃತಿಗೆ ಬರುವ ಸ್ವಪ್ನಗಳನ್ನು ವಿಮರ್ಶಿಸಿ ಅವುಗಳ ವಿವೇಚನೆ ಮಾಡಿ ನಮ್ಮ ಸೈಸರ್ಗಿಕ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬಹುದೆಂದು ಹೇಳಬಹುದು. ಸ್ವಪ್ನಗಳನ್ನು ವಿವೇಚಿಸಿದಾಗ ಸ್ವಪ್ನ ಕಂಡವನ ಪ್ರಾಮುಖ್ಯಭಾವನೆಯ ರೂಪರೇಖೆಯು ಸ್ಫೂರ್ತಿಯಾಗಿ ಅದರಲ್ಲಿ ತೋರುವದು. ಅಥವ ರಿಂದ ಸ್ವಪ್ನಗಳ ಸೂಕ್ಷ್ಮ ಪರಿಶೀಲಯಿಂದ ಕ್ರೀಯಾತ್ಮಕ ಶಕ್ತಿಯನ್ನು ಹೀಸಿ ಕೊಳ್ಳಬಹುದು. ಸ್ವಪ್ನಗಳು ಉಮ ಕಥೆಗೆ, ಉತ್ತುಂಗ ಭಾವನೆಗೆ ಅಸ್ಪ ಕೊಡುವವು. ಅವುಗಳನ್ನು ಗುರ್ತಿ ಬೆಳೆಸುವದರಿಂದ ಲಾಭವಾಗುವದು.

ನಿಜವಾಗಿ ಹೇಳುವದಾದರೆ ಜಾಗ್ರತ್ ಮನಸ್ಸಿಗಿಂತಾ ನಮ್ಮ ಸುಜೀತನವೇ ಪ್ರಾಮುಖ್ಯ. ಜಾಗ್ರತ್ ಚೇನ ಕ್ರಿಯಾತ್ಮಕವಾದುದು. ಸದಾ ಕೆಲಮೂಡುತ್ತಿದ್ದು ನಮ್ಮ ಬಾಹ್ಯ ಜೀವನ ಚೆಹ್ನೆಯಾಗಿದೆ. ಆದ್ದರಿಂದ ಅದರಲ್ಲಿ ನವ ಜೀವನಕ್ಕೆ ಸಂಬಂಧಿಸಿದ ಸಂಕೋಚ ಮತ್ತ ತರ ತೋರಿಕೆಯ ಪ್ರವೃತ್ತಿಗಳೆಲ್ಲ ಇರುವು. ನಮ್ಮ ನಿಜವಾದ ವ್ಯಕ್ತಿತ್ವವು ಸುಜೀತನದಲ್ಲಿದೆ. ನನಗೆ ಮನಸಿದ್ದರೂ ಮಾಜದ ಭೀತಿಯಿಂದ ಹತ್ತಿಕ್ಕಿದ ಆ ಪ್ರಾಯಗಳ ಸಮೂಹ ಇದು. ಇದೇ ನಮ ಅಂತರಿಕ ಇಲ್ಲವೇ ನಿಜಜೀವನದ ಕೇಂದ್ರ ಆದ್ದರಿಂದ ಈ ಭಾಗದಲ್ಲಿ ಗುಪ್ತವಾ ಅಡಗಿರುವ ವಿಚಾರಗಳನ್ನು ತಿಳಿಯುಬೆಕು. ನಿಜವಾಗಿಯೂ ನಮ್ಮ ಸ್ವಭಾವ, ಗುಣಗಳ ಆ ಮೂಲಕ ಅರಿವನ್ನು ಮೂಡಿಕೆಳ್ಳಬೇಕು. ಆದ್ದರಿಂದ ನಮ್ಮ ಸ್ವಪ್ನಗಳ ಭ್ಯಾಸವನ್ನು ಮೂಡುವದು ನಮ್ಮನ್ನು ದ್ದಿಕೊಳ್ಳಲು ಸಹಾಯಕವಾಗುವದು. ದರಲ್ಲಿ ಭವಿಷ್ಯದ ಸಂಕೇತವಾಗಲೀ, ಕಾಲದ ವಿಚಾರವಾಗಲೀ ಇಲ್ಲ. ಆದ ನಮ್ಮ ನೈಜ ವ್ಯಕ್ತಿತ್ವದ ಅಸ್ಪಷ್ಟ ಛಾಯೆ ಸ್ವಪ್ನದಲ್ಲಿ, ಸ್ವಪ್ನಕ್ಕೆ ಮೂಲ ಕಾರಣವ ದ ವಿದುಳಿನ ಸುಪ್ತ ಜೀವನ ವಿಭಾಗದಲ್ಲಿ ಇದೆ. ಅದನ್ನು ಗುರ್ತಿಸಿ ಸ್ವಪ್ನದಿಂದ ಅಮೂಲ್ಯ ಲಾಭಗಳಿಸುವ ಸಾಧ್ಯತೆ ಇದೆ

ಹುಡುಗರಿಗೆ ತಲೆನೋವು.

ಸುಮಾರು ೨,೦೦೦ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆ ಮಾಡಿದ ಯುನಿವರ್ಸಿಟಿ ಡಾಕ್ಟರರೊಬ್ಬರು ಆಂಡರ್‌ಗ್ರೆಜ್ಯುವೇಟ್ ವಿದ್ಯಾರ್ಥಿಗಳಲ್ಲಿ (ವಿದ್ಯಾರ್ಥಿನಿಯರಲ್ಲಿ) ಹಲವರು ಪರೀಕ್ಷೆಗಳ ಕಠಿಣತಾದ ಯೋಜನೆಯಿಂದಲೇ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆ ಎಂಬ ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಹೆಚ್ಚಿನವರು ತಲೆಯ ಮುಂಭಾಗದಲ್ಲಿ ನೋವು, ನಿದ್ರಾನಾಶಕ ಮುಂತಾದ ಪೀಡೆಗಳ ವಿಷಯ ತಿಳಿಸುತ್ತಿದ್ದಾರೆ. ಈ ಪೀಡೆಗಳು ತಲೆದೋರುವುದು ಪರೀಕ್ಷೆಗಳ ಯೋಚನೆಯಿಂದಲ್ಲದೆ ಬೇರಲ್ಲ. ಅದರೆ ವಿದ್ಯಾರ್ಥಿನಿಯರಿಗೆ ಈ ಪೀಡೆ ತಲೆದೋರುವುದು ಕಡಿಮೆ. ಸ್ವಾಭಾವಿಕವಾಗಿ ಗಂಡಸರ ಹೆಂಗಸಿಗಿಂತ ತೀವ್ರ ಆಕ್ಪ್ಯಾಂಕ್ಷೆಯುಳ್ಳವನಿರುತ್ತಾನೆ. ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣನಾಗಬೇಕೆಂಬ ಹಿರಿದಾದ ಹಂಬಲ ಅವನಿಗಿರುತ್ತದೆ. ಹುಡುಗಿಯರಿಗೆ ಹಾಗಲ್ಲ. ಒಂದು ವೇಳೆ ಪರೀಕ್ಷೆಯಲ್ಲಿ ಫೈಲಾದರೆ ಮುಂದೆ ವಿವಾಹದಲ್ಲಿ ಜಯಪಡೆಯಬಹುದೆಂಬ ಧೈರ್ಯ ಇರುತ್ತದೆ.

ಪಾಕಿಸ್ತಾನದ ನೀತಿ

'ಜೈ ಹಿಂದ್' ಪತ್ರಿಕೆಯಿಂದ

ಕಳೆದ ಎರಡು ಮೂರು ವರುಷಗಳಿಂದ ಪಾಕಿಸ್ತಾನವು ನಡೆಸಿದ ಚಟುವಟಿಕೆ, ಆಡುವ ಆಟ, ನುಡಿದ ನುಡಿ, ಮಾಡುವ ಕೃತಿಗಳನ್ನು ನೋಡಿದರೆ, ಮಹಾಭಾರತದ ಕಾರವ ಕಾಲದ ನೆನಪು ಬರದೆ ಇರಲಾರದು. ಬರಿ ದುಷ್ಟ ಆಚಾರಗಳಿಂದ ಕೂಡಿ "ತಾನೂ ಸುಖಪಡಲೊಲ್ಲೆ. ನೆರೆಯವರಿಗೂ ಸುಖಪಡಲು ಬಿಡಲೊಲ್ಲೆ", ಎಂಬ ಹಟಮಾರಿ ತುಂಟ ಹುಡುಗನಂತೆ ಪಾಕಿಸ್ತಾನವು ನಡೆದುಕೊಳ್ಳುತ್ತಿದೆ. ದುರ್ಯೋಧನನಿಗೆ ಒಬ್ಬ ಶಕುನಿ ದೊರೆತಂತೆ ಪಾಕಿಸ್ತಾನೀ ಕೌರವ ಕುಲಕ್ಕೆ ಹಿಂದೆ 'ಆಂಗ್ಲ ಶಕುನಿ" ಇದ್ದಾನೆಂದು ಅನೇಕ ತಜ್ಞರು ಅಭಿಪ್ರಾಯ ಪಟ್ಟಿದ್ದು, ದಿನ ದಿನಕ್ಕೂ ಹೌದೆನಿಸುವಂತೆಯೇ ಪಾಕಿಸ್ತಾನವು ತನ್ನ ಚಟುವಟಿಕೆಗಳನ್ನು ಸಾಗಿಸಿದೆ.

ಯಾವ ರೀತಿ?

ಅಖಂಡ ಭಾರತದಿಂದ ಭಾಗವಾಗಿ ಪಾಕಿಸ್ತಾನವು ರೂಪುಗೊಂಡಂದಿನಿಂದ ತನ್ನ ಭಾಗದ ಜನರ, ಭೂಮಿಯ ವ್ಯಾಪಾರೋದ್ಯಮದ, ಯಂತ್ರ ಕೈಗಾರಿಕೆಯ, ಸಂರಕ್ಷಣದ, ಆಡಳಿತೆಯ ಮೊದಲಾದ ಯಾವ ಮಹತ್ವದ ವಿಷಯಗಳಿಗೂ ಗಮನವೀಯದೆ ಕೇವಲ ಪರಪೀಡಕ ವೃತ್ತಿಯಿಂದಲೇ ಅದು ತೃಪ್ತಿಪಡುವಂತೆ ತೋರುತ್ತದೆ. ಈ ಮಾತಿಗೆ ಜನಾಗಡದಿಂದ ಪ್ರಾರಂಭವಾಗಿ ಪಂಜಾಬ, ಬಂಗಾಲ ಹೈದರಾಬಾದಗಳೇ ಸುಸ್ಪಷ್ಟ ಉದಾಹರಣೆಗಳಾಗಿಗುತ್ತವೆ. ಕೇವಲ ಜಾತೀಯತೆಯ ತಳಹದಿಯ ಮೇಲೆಯೇ ರಾಷ್ಟ್ರಕಟ್ಟಲು ಹೊರಟಿರುವಂತೆ ಅದರ ಕಾರ್ಯಕ್ರಮಗಳು ಕೈಯೆತ್ತಿ ಹೇಳುತ್ತವೆ.

ಯಾವ ಜಾತೀಯತೆಯ ತಳಹದಿಯ ಮೇಲೆ ಅದು ರಾಷ್ಟ್ರ-ಸರಕಾರ ಕಟ್ಟಹೊರಟಿದೆಯೋ ಆ ಜಾತೀಯರ ಹಿತಸಂಬಂಧಗಳಿಗಾಗಿ, ಸುಖಶಾಂತಿಗಾಗಿ ಸರ್ವತೋಮುಖ ಅಭಿವೃದ್ಧಿಗಾಗಿ ಪೂರ್ಣ ಪ್ರಯತ್ನ ಪಡುತ್ತ ಬೇಕಾದ ತ್ಯಾಗವನ್ನಾದರೂ ಮಾಡಲು ಸಿದ್ಧವಿದೆಯೆನ್ನಲು ಸಾಧ್ಯವೆ? ಆದರೂ ಇಲ್ಲ ತನ್ನೊಳಗಿನ ತಜ್ಞರೇ ಆದ ಜನರನ್ನು ಸಮರ್ಥರೂ ತಜ್ಞರೂ ಆದವರನ್ನು ಬಂಧನದಲ್ಲಿರಿಸಿದೆ. ಜತೆಯ ಅಫಗಾನಿಸ್ತಾನದೊಡನೆ ಮನಸ್ಸು ಕೆಡಿಸಿಕೊಂಡಿದೆ. ಅದೂ ಹೋಗಲಿ ತಾನು ಉದ್ಭವಿಸಿ ಮೂರು ವರುಷಗಳ ಕಾಲ ಮುಗಿಯುತ್ತ ಬಂದರೂ, ತನ್ನ ರಾಜ್ಯಘಟನೆಯನ್ನು ತನಗೇ ಮೂಡಿಕೊಳ್ಳಲು ಅದಕ್ಕೆ ಬಿಡುವೇ ಇಲ್ಲದಾಗಿದೆ. ಇದೆಂತಹ ಪಾಕೀಸ್ತಾನೀ ರೀತಿ?

ಪಾಕ-ಅಫಗಾನಿಸ್ತಾನ

ಮೊನ್ನೆ ಮೊನ್ನೆ ಒಂದು ಸಂಗತಿ ಪಾಕಿಸ್ತಾನದಲ್ಲಿ ಘಟಿಸಿರುತ್ತದೆ. ಅದು ಅಫಗಾನಿಸ್ತಾನದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಶ್ರೀ. ಐ. ಐ. ಚುಂದ್ರಿಗಾರ ಇವರನ್ನು ಅದು ವಾಯವ್ಯ ಗಡಿನಾಡು ಪ್ರಾಂತದ ಗವರ್ನರರನ್ನಾಗಿ ನಿಯಮಿಸಿಕೊಂಡಿದ್ದು ಇನ್ನೂ ಅವರಿಗೂ ಅಫಗಾನಿಸ್ತಾನದಲ್ಲಿ ತನ್ನ ರಾಯಭಾರಿ ಸ್ಥಳಕ್ಕೆ ಯಾರನ್ನೂ ನಿಯಮಿಸಿಯೇ ಇಲ್ಲ! ಪಾಕ-ಅಫಗಾನ ನಡುವಿನ ಸಂಬಂಧವು ದಿನೇ ದಿನೆ ಕೆಡುತಿದ್ದು, ಎರಡೂ ರಾಷ್ಟ್ರಗಳ ರಾಯಭಾರಿ ಸಂಬಂಧವು ಸಂಪೂರ್ಣವಾಗಿ ಕಡಿದು ಹೋಗುವ ದಿನವು ದೂರವಿಲ್ಲವೆಂದೂ ದಟ್ಟವಾರ್ತೆ ಇದೆ. ಒಂದು ವೇಳೆ ಯುದ್ಧದ ಪ್ರಸಂಗವೇ ಬಂದಲ್ಲಿ, ಅಫಗಾನಿಸ್ತಾನದ ಒಳಹೊರಗನ್ನೆಲ್ಲಾ ಸಂಪೂರ್ಣ ಬಲ್ಲವರಾದ ಶ್ರೀ ಚುಂದ್ರಿಗಾರರು ಗಡಿನಾಡ ಗವರ್ನರಾಗಿರುವುದು ಅವಶ್ಯವೆಂದು ತಿಳಿದೇ ಹೀಗೆ ಪಾಕಿಸ್ತಾನ ಸರಕಾರವು ಮೂಡಿರುವದೆಂದೂ ಅಲ್ಲಿಯ ಕೆಲವು ರಾಜಕಾರಣಿಗಳು ಅಭಿಪ್ರಾಯ ಪಡುತಿದ್ದಾರೆ.

ಪಾಕ-ಭಾರತ

ಭಾರತದ ಬಗ್ಗೆಯಂತೂ ಪಾಕಿಸ್ತಾನದ ಧ್ಯೇಯ ಧೋರಣಗಳು ಏನಿರುವವೆಂಬದನ್ನು ಹೇಳುವುದೇ ಬೇಡ. ಭಾರತಕ್ಕೆ ಎಡಬಲ ಪಕ್ಕಗಳಲ್ಲಿಯು ಮೊನೆಯೂದಮುಳ್ಳಿನಂತೆ ಪಾಕಿಸ್ತಾನವು ಚುಚ್ಚುತ್ತಲಿದೆ. ಪಂಜಾಬ ಬಂಗಾಲಗಳೆರಡೂ ಅಶಾಂತಿಯಿಂದ ಧಗಧಗಿಸುತ್ತವೆ ಸುಳ್ಳಿನ ಡೊಂಬರಲಾಗದಲ್ಲೆಂತೂ ಪಾಕಿಸ್ತಾನವು ಎಲ್ಲರನ್ನೂ ಮೀರಿಸುವಂತಿದೆ. ಕಳೆದ ಫೆಬ್ರುವರಿ ೧೭ರ ವರೆಗೆ ಬಂಗಾಲದಲ್ಲಾದ ಹಾನಿಯನ್ನು ಕುರಿತು ಭಾರತ ಪ್ರಧಾನಾಮಾತ್ಯ ಪಂಡಿತಜೀಯವರು ಕಲಕತ್ತೆಯಲ್ಲಿ 'ಅಲ್ಲಿ ಮೃತಪಟ್ಟ ಜನರ ಸಂಖ್ಯೆ ಒಟ್ಟು ಮೂವತ್ತೊಂದು. ಅದರಲ್ಲಿ ಇಪ್ಪತ್ತು ಮುಸ್ಲಿಮರು, ಹನ್ನೊಂದು ಹಿಂದೂಗಳು" ಎಂದು ಘಂಟಾಘೋಷವಾಗಿ ಸಾರಿದ್ದರೂ ಪಾಕಿಸ್ತಾನ ಪತ್ರಿಕೆಗಳು ಮೃತಪಟ್ಟವರ ಸಂಖ್ಯೆ ಹತ್ತುಸಾವಿರವೆಂದು ಪ್ರಚಿದ್ಧಿಸಿರುತ್ತವೆ! ಆ ಬಳಿಕ ಮೊನ್ನೆ ಪಾಕಿಸ್ತಾನ ಪ್ರಧಾನಾಮಾತ್ಯರು ಹೀಗೆ ಸುಳ್ಳು ಸಂಖ್ಯೆ ಪ್ರಕಟವಾದುದು ನಿಜವೆಂದೂ ಅದು ಪ್ರವಾಸದ ಮೂಲಕ ಆಗಿರುವುದೆಂದೂ ಅದನ್ನು ಸುಧಾರಿಸಿಕೊಳ್ಳಲು ಪಾಕಿಸ್ತಾನ ಸುದ್ದಿ ಸಂಸ್ಥೆಗೆ ತಾವು ತಿಳಿಸಿದ್ದಾಗಿಯೂ ಪಂಡಿತಜಿಯವರ ಪತ್ರಕ್ಕೆ ಉತ್ತರ ಬರೆದಿದ್ದಾರೆ.

ಪಾಕಿಸ್ತಾನದ ಕೌರವತೆ

ಹೀಗೆ ಒಂದಿಲ್ಲೊಂದು ಬಗೆಯಿಂದ ಅನೇಕ ವಾಮಮಾರ್ಗಗಳನ್ನು ಹುಡುಕಿಕೊಂಡು ಪಾಕಿಸ್ತಾನವು ತನ್ನ ಕೌರವತೆಯನ್ನು ಜಗತ್ತಿನೆದುರು ತೋರಿಸುತ್ತಲಿದೆ "ತನ್ನ ಹಿತವನ್ನೇ ತನಗೆ ಗೊತ್ತಿರದವನು ಉಳಿದವರ ಹಿತದ ಬಗ್ಗೆ ಏನು ಗಣಿಸಿಯಾನು?" ಎಂಬಂತೆ ಪಾಕಿಸ್ತಾನದ ನೀತಿ ರೀತಿಗಳವೆಯೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಮೇಲೆ ಹೇಳಿದಂತೆ 'ಶಕುನಿ'ಯ ಪ್ರಚೋದನೆಯಿಂದ ಕೌರವನು ತನ್ನ ಕುಲಘಾತವನ್ನೂ ಮಾಡಿಕೊಂಡುದಲ್ಲದೆ ಬಂಧುಗಳಾದ ಪಾಂಡವರಿಗೂ ಪಡಬಾರದ ಕಷ್ಟಗಳನ್ನು ಪಡುವಂತೆ ಮಾಡಿದಂತೆ ಪಾಕಿಸ್ತಾನವು ಇನ್ನೂ ತನ್ನ 'ಶಕುನಿ' ಪ್ರಚೋದನೆಯಿಂದ ತನ್ನ ಆತ್ಮಘಾತದ ದಾರಿಯನ್ನೇ ಹಿಡಿಯುತ್ತಿರುವುದು ದುಃಶೋಚನೀಯವೆಂದೇ ಹೇಳಬೇಕಾಗುತ್ತದೆ. ಹುಟ್ಟಿ ಮೂರು ವರುಷಗಳು ಮುಗಿಯುತ್ತ ಬಂದರೂ, ಇನ್ನೂ ತನ್ನ ಉತ್ಸಾಹವೆಲ್ಲವನ್ನೂ ವೆಚ್ಚಮಾಡುವುದು ಆತ್ಮಘಾತದ ನೀತಿಯಲ್ಲದೆ ಇನ್ನೇನು? ಇನ್ನಾದರೂ ಪಾಕಿಸ್ತಾನವು ಕಣ್ಣು ತೆರೆದು ತಾನು ಹೇಗೆ ಒಳಿತಾಗಿ ಬಾಳಿಯೇನು? ಎಂಬದರ ಕೆಡೆಗೆ ಗಮನಕೊಟ್ಟು "ತಾನು ಒಳಿತಾಗಿ ಬಾಳಬೇಕು; ಇತರರನ್ನೂ ಒಳಿತಾಗಿ ಬಾಳಗೊಡಬೇಕು" ಎಂಬ ಧೋರಣದಿಂದ ನಡೆಯುವುದೋ?

ಜೈಲಿನಿಂದ ಪರಾರಿ

ಹೈದರಾಬಾದಿನ ಹಿಂದಿನ ಮುಖ್ಯ ಮಂತ್ರಿ ಲಾಯಕ್ ಅಲಿಯವರ ಕಣ್ಮರೆ

ಹೈದರಾಬಾದದಲ್ಲಿ ತನ್ನ ಬಂಗಲೆಯಲ್ಲಿ ಬಂಧಿಯಾಗಿರಿಸಲ್ಪಟ್ಟಿದ್ದ, ಹೈದರಾಬಾದದ ಮಾಜಿ ಪ್ರಧಾನ ಸಚಿವ ಮಿರ್ ಲಾಯಕ್ ಅಲಿಯವರು ಕಾಣೆಯಾದುದು ಮಾತ್ರವಲ್ಲ, ಅವರ ಹೆಂಡತಿ ಮತ್ತು ಮಕ್ಕಳೂ ಕಾಣೆಯಾಗಿರುವರೆಂದು ಪ್ರಕಟವಾಯಿತು. ಲಾಯಕ್ ಅಲಿಯವರು 'ಬುರ್ಖಾ' ('ಘೋಷಾ') ದಲ್ಲಿ ತಪ್ಪಿಸಿಕೊಂಡಿರಬೇಕೆಂದೂ, ಪಾಕಿಸ್ತಾನ ಸೇರಿರಬೇಕೆಂದೂ ಊಹಿಸಲಾಗಿದೆ.

ಪಾಕಿಸ್ತಾನದಿಂದ ಬಂದ ಕೆಲವು ದೂತರ ಸಹಾಯದಿಂದ ಈ ಪ್ರಕರಣ ನಡೆದಿರಬೇಕೆಂದೂ ಒಂದು ಊಹೆ. ಇತ್ತೀಚೆಗೆ, ಹೈದರಾಬಾದಿಗೆ, ಪಾಕಿಸ್ತಾನದಿಂದ ಅನೇಕರು ಬಂದಿದ್ದರೆನ್ನಲಾಗಿದೆ.

ಆಲಿಯವರ ಪತ್ನಿಯನ್ನು ಕಾಣಲೆಂದು ಕೆಲವು ಘೋಷಾ ಸ್ತ್ರೀಯರು ಆಗಾಗ್ಗೆ ಹೋಗುತಿದ್ದರಂತೆ; ಆವರಿಗೆ ಸರಾಗವಾಗಿ ಪ್ರವೇಶ ದೊರೆಯುತಿತ್ತು. ಲಾಯಕ್ ಆಲಿಯವರೂ ಒಂದು ಪರದೆಯಲ್ಲಡಗಿ, ಪರಾರಿಯಾಗಿದ್ದಿರಬೇಕು—ಎನ್ನುವರು.

ಇತ್ತೀಚೆಗೆ ಲಾಯಕ್ ಆಲಿಯವರ ಬಂಗಲೆಯಲ್ಲಿ ಕೆಲಸದಲ್ಲಿದ್ದ ನೌಕರರು, ಒಂದೆಲ್ಲ ಒಂದು ನೆಪದಿಂದ ಕೆಲಸದಿಂದ ತೆಗೆದುಹಾಕಲ್ಪಟ್ಟಿದ್ದರಂತೆ. ಹೀಗಾಗಿ, ಲಾಯಕ್ ಆಲಿಯವರು ತಲೆಮರೆಸಿಕೊಂಡು ಹೋಗುವಾಗ ನೌಕರರು ಕೂಡ ಉಳಿದಿರಲಿಲ್ಲ. ಇದು ಕೂಡ ಮೊದಲಿಂದಲೇ ಯೋಚಿಸಿಟ್ಟ ಕಾರ್ಯಕ್ರಮಗಳಲ್ಲೊಂದು ಎಂದೂ ತರ್ಕಿಸಲಾಗುತ್ತಿದೆ.

ಲಾಯಕ್ ಆಲಿಯವರು ಕೆಲ ಕಾಲದಿಂದ ಗಡ್ಡ ಬೆಳೆಸಿದ್ದರಂತೆ. ಕ್ಷಯವಾಗಲೂ, ತೋಟದಲ್ಲಿ ಅಡ್ಡಾಡುತಿದ್ದವರು ಇತ್ತೀಚೆಗೆ ಕೆಲ ದಿನಗಳಿಂದ ಕಾಣುತ್ತಿರಲಿಲ್ಲ. (ಲಾಯಕ್ ಆಲಿಯವರ ಬಂಗಲೆಯು ಒತ್ತಿಗೆ ಚೀಫ್ ಸೆಕ್ರೆಟರಿ ಶ್ರೀ. ಎಲ್. ಸಿ. ಜೈನ್‌ರವರ ಬಂಗಲೆಯೂ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆದ ಬಿ. ಬಿ. ಎಸ್. ಜೆಟ್ಲಿಯವರ ಬಂಗಲೆಯೂ ಇವೆ. ಈ ಎರಡು ಬಂಗಲೆಗಳೂ ಲಾಯಕ್ ಆಲಿಯವರ ಕುಟುಂಬಕ್ಕೆ ಸೇರಿದ್ದು, ಅವುಗಳನ್ನು ರಿಕ್ವಿಜಿಶನ್ ಮಾಡಿಕೊಳ್ಳಲಾಗಿತ್ತು. ಲಾಯಕ್ ಆಲಿಯವರು ತಮ್ಮ ಬಂಗಲೆಯ ತೋಟದಲ್ಲಿ ವಾಯು ಸೇವನೆಗೆ ಬಂದಾಗ್ಗೆ, ಅವೆರಡೂ ಬಂಗಲೆಗಳವರಿಗೆ ಕಾಣುತಿತ್ತು.)

ಲಾಯಕ್ ಆಲಿಯವರಿಗೆ ಒಂದು ಹೆಂಡತಿ, ಐವರು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗು. ಹಿರೀ ಮಗಳ ವಯಸ್ಸು ೨೪; ಚಿಕ್ಕವಳದು ಎರಡು; ಮಗನ ವಯಸ್ಸು ಒಂಭತ್ತು.

ಲಾಯಕ್ ಆಲಿಯವರು ಆರೇಳು ದಿನಗಳ ಹಿಂದೇ ಹೈದರಾಬಾದನ್ನು ಬಿಟ್ಟು, 'ಪಾಕಿಸ್ತಾನ ಸೇರಿರಬೇಕೆಂದು ಕೆಲವರು ತರ್ಕಿಸುವಾಗ, ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಮಿ. ಜೆಟ್ಲಿಯವರು ಆವರು ಹೈದರಾಬಾದ ನಗರದೊಳಗೇ ಅಡಗಿರಬೇಕೆಂದು ಅಭಿಪ್ರಾಯಪಡುತ್ತಾರೆ.

ಆಲಿಯು ಬೇಟೆಯಾಗುತ್ತಿದೆ. ಆಲಿಗೆ ಸಂಬಂಧಿಸಿದವರನೇಕರಲ್ಲಿ ಪೊಲೀಸರು ನುಗ್ಗಿ ಹುಡುಕಾಡಿದ್ದಾರೆ. ಹೈದರಾಬಾದ ನಗರದೊಳಗಿನ ಓಣಿ ಕೇರಿಗಳೆಲ್ಲೆಲ್ಲ ಮಿ. ಜೆಟ್ಲಿಯವರು ಸ್ವತಃ ಮೋಲ್ಸಿಜರ ವಹಿಸಿ ಮನೆಮನೆಗಳನ್ನೂ ಬಾಚಿಕೊಂಡು ನೋಡುತ್ತಿದ್ದಾರೆ.

ಭಾರತ ಪಾರ್ಲಿಮೆಂಟಿನಲ್ಲಿ, ಲಾಯಕ್ ಆಲಿ ಪ್ರಕರಣವನ್ನು ಚರ್ಚಿಸಬೇಕೆಂದು, ಶ್ರೀ. ಎಚ್. ವಿ. ಕಾಮತರು ಸೂಚಿಸಿದಾಗ, 'ಅದು ಹೈದರಾಬಾದ ಆಡಳಿತಕ್ಕೆ ಸಂಬಂಧಪಟ್ಟ ವಿಚಾರ' ಎಂದು, ಚರ್ಚಾನಂತರ ತೆಗೆದು ಹಾಕಲಾಯಿತು.

ಲಾಯಕ್ ಆಲಿಯವರ ಬಂಗಲೆಯ ಪಹರೆಮಾಡುತ್ತಿದ್ದ ಹದಿನೈದು ಮಂದಿ ಪಹರೆಯವರನ್ನು ಬಂಧನದಲ್ಲಿಟ್ಟಿರುವರು.

ಲಾಯಕ್ ಆಲಿಯವರು ಹೈದರಾಬಾದದ ಪ್ರಧಾನ ಸಚಿವರಾಗಿದ್ದಾಗ, ಪ್ರಜಾಪೀಡನ ಕಾರ್ಯದಲ್ಲಿ ಅವರ ಹಸ್ತಕರಾಗಿದ್ದ (ಲಾಯಕ್ ಆಲಿ ಮಂತ್ರಿ ಮಂಡಲದಲ್ಲಿದ್ದ) ಇತರ ಎಂಟು ಮಂದಿಯವನ್ನು, ಈಗ ಹೈದರಾಬಾದ ಸೆಂಟ್ರಲ್ ಜೈಲಿಗೊಯ್ದಿರುವರು: ೧. ಪಿಂಗಳಿ ವೆಂಕಟರಮಣ ರೆಡ್ಡಿ. ೨. ಅಬ್ದುಲ್ ರಾಫ್. ೩. ಯಮಿನ್ ಖಿಬೇರಿ. ೪. ಬಿ. ಮಸ್. ವೆಂಕಟರಾವ್. ೫. ರಾಜಮೋಹನಲಾಲ್. ೬. ಅಬ್ದುಲ್ ಹವಿದ್ ಖಾನ್. ೭. ಅಬ್ದುರ್ ರಹೀಮ್. ೮. ನವಾಬ್ ಫಖ್ರುಲ್ ನವಾಜ್ ಜುಂಗ್. ೯. ನವಾಬ್ ಮೊಯಿನ್ ನವಾಜ್ ಜಂಗ್ (ಲಾಯಕ್ ಆಲಿಯ ಭಾವ; ಮಾಜಿ ಅರ್ಥ ಸಚಿವ; ಇತ್ತೀಚೆಗಿನವರು—ಇವರಿಬ್ಬರೂ, ಭಾರತ ಸರಕಾರವು ಹೈದರಾಬಾದದ ಮೇಲೆ ಪೊಲೀಸ್ ಕಾರ್ಯಕ್ರಮವು ತೆಗೆದುಕೊಳ್ಳುವ ಮೊದಲೇ ಯುನೈಟೆಡ್ ನೇಶನ್ಸಿಗೆ ತಿಸ್ವನುಂಡಲ ಒಯ್ದರು, ಕಿರಿಗಿ ಬರಲಿಲ್ಲ.) ಇತ್ತಲಾಗಿ ಲಾಯಕ್ ಆಲಿಯವರು ಭಾರತದಿಂದ ತಪ್ಪಿಸಿಕೊಂಡು ಪಾಕಿಸ್ತಾನಕ್ಕೆ ಹೋಗಿ ಈಗ ಕರಾಚಿಯಲ್ಲಿದ್ದಾನೆಂದೂ ಮುಂದೆ ಆ ಮೂಲಕ ಅಮೇರಿಕಾಕ್ಕೆ ಹೋಗಬಹುದೆಂದೂ ಊಹಿಸಲಾಗಿದೆ.

ಸಮೂಜಶಾಸ್ತ್ರದ

ವಿಖ್ಯಾತ ಸಂಶೋಧಕರು.

ಡಾ. ಇರಾವತಿಬಾಯಿ ಕರ್ವೆ

ಡಾ. ಇರಾವತಿಬಾಯಿಯವರು ಏಪ್ರೀಲ್ ತಿಂಗಳ ಮಧ್ಯದಲ್ಲಿ ಕೊಡಗಿನಲ್ಲಿ ಅಲ್ಲಿಯ ಸಮೂಜ ಸಂಸ್ಕೃತಿಗಳ ವಿಶೇಷ ಅಭ್ಯಾಸಕ್ಕಾಗಿ ಬರಲಿರುವರು. ಈ ಕಾರಣದಿಂದ ಅವರ ಪರಿಚಯವು ಕೊಡಗಿನವಂಗೆ ಮೊದಲೆ ಸ್ವಲ್ಪ ತಿಳಿದಿದ್ದರೆ ಲೇಸೆಂದು ಈ ಅಲ್ಪ ಪರಿಚಯವನ್ನು ಇಲ್ಲಿ ಕೊಡುತ್ತಿದ್ದೇನೆ.

ಡಾ. ಇರಾವತಿಬಾಯಿಯವರ ಜನ್ಮ ಬ್ರಹ್ಮದೇಶದಲ್ಲಿ ಆಯಿತು. ಇರಾವತಿ ನದೀತೀರದಲ್ಲಿ ಹುಟ್ಟಿದ ಶಿಶುವೆಂದು ಇವರ ತಾಯಿ ತಂದೆಯವರು ಆ ಸವಿನೆನಪಿಗಾಗಿ ಅದೇ ಹೆಸರನ್ನಿಟ್ಟರು. ಒಳ್ಳೆಯ ರೂಪ–ಗುಣ–ಸೌಂದರ್ಯಗಳ ವ್ಯಕ್ತಿತ್ವವು ಳ್ಳ ಈ ಬಾಲೆಯ ಬುದ್ಧಿವಂತಿಕೆಯಲ್ಲೂ ಒಳ್ಳೆ ಮಿಗಿಲಾದವಳೆಂದು ಕಂಡು ಬಂದುದರಿಂದ ಅವರ ತಂದೆಯವರು ಕಾಲೇಜಿನ ಉಚ್ಚ ಶಿಕ್ಷಣವನ್ನೂ ಕೊಡಿಸಿದರು. ಮುಂಬೈ ವಿಶ್ವವಿದ್ಯಾನಿಲಯದಲ್ಲಿ ಎಂ. ಎ. ಪರೀಕ್ಷೆಯಲ್ಲಿ ಯಶಸ್ವಿಯಾದರು.

ಈಗ ಪೂನಾದ ಫರ್ಗುಸನ್ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಡಾ. ದಿನಕರ ರಾವ ಕರ್ವೆ ಅವರೊಡನೆ ಅವರ ವಿವಾಹವು ಆಯಿತು. ಫರ್ಗುಸನ್ ಕಾಲೇಜು ಖಾಸಗಿ ಸಂಸ್ಥೆ, ಅಲ್ಲಿ ಆಜನ್ಮ ಸೇನಕರಾಗಿ ಕೆಲಸಕ್ಕೆ ಸೇರುವುದೆಂದರೆ ಬಡತನವನ್ನು ಸ್ವಾಗತಿಸಿದಂತೆಯೇ, ಏಕೆಂದರೆ ಅಲ್ಲಿ ೧೦೦ ರೂ. ಮಾತ್ರ ಸಂಬಳ ಕೊನೆಯವರೆಗೂ ಪ್ರತಿ ತಿಂಗಳು! ಇಂತಹ ಗಂಡನನ್ನು ವರಿಸಿದ್ದಕ್ಕಾಗಿ ತಂದೆ ಸಿಟ್ಟಾದರು. ಇಬ್ಬರೂ ಒಳ್ಳೆ ವಿದ್ವಾಂಸರು. ಸರಕಾರಿ ಕೆಲಸಕ್ಕೆ ಸೇರಿದ್ದರೆ ಸಾವಿರದ ಸಂಬಳ ನಿಶ್ಚಿತವಿರುತಿತ್ತು. ಮೂವಂದಿರು ಎಂದರೆ ಡಾ. ಇರಾವತಿಬಾಯಿ ಅವರ ತಂದೆಯವರು ದೊಡ್ಡ ಪದವಿಯಲ್ಲಿ ಇದ್ದವರು. ಅವರ ಮೂಲಕ ಡಾ. ದಿನಕರರಾಯರಿಗೆ ಕೈತುಂಬ ಸಂಬಳದ ಕೆಲಸ ಎಲ್ಲಿಯೂ ದೊರೆಯುವಂತಿತ್ತು. ಒಂದೆರಡು ಬಾರಿ ಇಂತಹ ಕರೆ ಬಂದರೂ ಅವರು ಸ್ವಾರ್ಥತ್ಯಾಗ ಮಾಡಿದರೆ ವಿನಹ ಅವಕ್ಕೆ ಮೋಹಿಸಲಿಲ್ಲ.

ಮದುವೆಯಾದ ಬಳಿಕ ಇಬ್ಬರೂ ದಂಪತಿಗಳು ಹೆಚ್ಚಿನ ಅಭ್ಯಾಸಕ್ಕಾಗಿ ಜರ್ಮನಿಗೆ ಹೋದರು. ಡಾ. ದಿನಕರರಾಯರು ರಸಾಯನ ಶಾಸ್ತ್ರದಲ್ಲಿ ಹೆಚ್ಚಿನ ಪದವಿಯನ್ನು ಸಂಪಾದಿಸಿ ಕೀರ್ತಿಪಡೆದಿರುವರು. ಡಾ. ಇರಾವತಿಬಾಯಿಯವರು ಸಮೂಜ ಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಇಟ್ಟುಕೊಂಡು ಅದರಲ್ಲಿ ಪ್ರಾವೀಣ್ಯತೆಯನ್ನು ಪಡೆದರು. ಸಂಸ್ಕೃತದಲ್ಲಿ ಜನವಿಖ್ಯಾತ ಕೀರ್ತಿಯನ್ನು ಪಡೆದ ಡಾ. ಎಡಿಸನ್ ಇವರ ಕೈಕೆಳಗಿನ ಅಧ್ಯಯನ ಮಾಡುವ ಸುಯೋಗವು ಅವರಿಗೆ ದೊರೆತಿತ್ತು. ಸಮೂಜ ಶಾಸ್ತ್ರದ ಹೊರತು ಸಂಸ್ಕೃತ ಕಾವ್ಯಗಳಲ್ಲೂ ಇವರಿಗೆ ಅತೀವ ಪ್ರೀತಿ.

ಪೂನಾ ವಿಶ್ವವಿದ್ಯಾನಿಲಯದ ಡೆಕ್ಕನ್ ಕಾಲೇಜಿನಲ್ಲಿ ಸುವಿಖ್ಯಾತ ಸಂಶೋಧನ ಮಂದಿರದಲ್ಲಿ ಡಾ. ಇರಾವತಿಬಾಯಿಯವರು ಸಮೂಜ ಶಾಸ್ತ್ರದ ಪ್ರಮುಖ ಪ್ರೊಫೆಸರಂತಾಗಿದ್ದಾರೆ.

ಇವರು ಮುಂಬೈ ವಿಶ್ವವಿದ್ಯಾನಿಲಯದ ಮುಖಾಂತರವಾಗಿ ಸಮೂಜ ಶಾಸ್ತ್ರದ ಹಲವು ಶಾಖೆಗಳಲ್ಲಿ ಸಂಶೋಧನ ಮಾಡಿದ್ದಾರೆ. ಮಹಾರಾಷ್ಟ್ರದ ಜನಗಳ ತಲೆಮಾರುಗಳ ಅಳತೆ ಮೊದಲಾದುವುಗಳ ಮೂಲಕ ಮಾಡಿದ ಅವರ ಶೋಧವು ಅವರಿಗೆ ಅಖಿಲ ಭಾರತೀಯ ಆದೇಕೆ ಅಂತರ್‌ರಾಷ್ಟ್ರೀಯ ಕೀರ್ತಿಯನ್ನು ತಂದಿದೆ.

ಈಗ ಅವರು ಕರ್ನಾಟಕದ ಜನಾಂಗ, ಜಾತಿಗಳ ಸಂಶೋಧನೆಗೆ ಹೊರಟಿರುವರು. ಸೊಲ್ಲಾಪುರ, ವಿಜಾಪುರ, ಧಾರವಾಡ, ಬೆಂಗಳೂರುಗಳಲ್ಲಿ ಕೆಲಸವನ್ನು ಆರಂಭಿಸಿದ್ದಾರೆ. ಕೊಡಗು, ದಕ್ಷಿಣ ಉತ್ತರ ಕನ್ನಡ ಜಿಲ್ಲೆಗಳ ಸಂಚಾರವನ್ನೂ ಕೈಕೊಳ್ಳಲಿರುವರು. ಕೊಡಗಿನ ಜಿಜ್ಞಾಸುಗಳೂ ಸಂಸ್ಕೃತಿಯ ಅಭ್ಯಾಸಿಗಳೂ ಅವರನ್ನು ಸ್ವಾಗತಿಸದೆ ಇರಲಾರರೆಂದು ಹಾರೈಕೆ. —ಶಂ. ಬಾ. ಜೋಶಿ.

ಕೊಡಗಿನ ರೈತರ ಅವಗಾಹನೆಗೆ.

ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಸಿ ಇಂದು ಶಲೆದೋರಿರುವ ಆಹಾರ ಅಭಾವ ಸಂಕೋಲೆಯನ್ನು ಮುರಿಯಬೇಕೆಂಬ ಪ್ರಚಾರವು ನಮ್ಮ ದೇಶದ ಉದ್ದಗಲಕ್ಕೂ ಹರಿಡಿರುವುದು ಹೊಸ ಸಂಗತಿಯಲ್ಲ. ಈ ಯೋಜನೆಗೆ ಉಪಯುಕ್ತವಾಗಿ ಕೊಡಗಿನ ಕಾಫಿ ಕಿತ್ತಳೆ ತೋಟಗಳಲ್ಲಿ ಕಂಡುಬರುವ ಹಲವು ತರದ ದೋಷಗಳನ್ನು ಸ್ಪ್ರೇಮಾಡಿ, ನಾಶಮಾಡುವ ಸ್ಪ್ರೇಯರ್ ಯಂತ್ರಗಳು ಕೊಡಗಿನ ವ್ಯವಸಾಯ ಇಲಾಖೆಯಿಂದ ಬಾಡಿಗೆಗೆ ಕೊಡಲಾಗುವುದು. ಇಚ್ಛಿಸುವ ರೈತರು ಈ ಕೆಳಗಿನ ರೀತಿಯಲ್ಲಿ ನಿಗಳಿಗೆ ಬದ್ಧರಾಗಿ ಈ ಯಂತ್ರಗಳಿಗೆ ನಿಶ್ಚಯಿಸಿದ ಬಾಡಿಗೆಗೆ ಕೊಟ್ಟು ತಮ್ಮ ತೋಟದಲ್ಲಿ ಉಪಯೋಗಿಸಿಕೊಳ್ಳಬಹುದು.

೧. ಹತ್ತು ಎಕ್ರೆಗಳಿಗೆ ಒಳಪಟ್ಟ ಕಿತ್ತಳೆ ವ್ಯವಸಾಯಗಾರರಲ್ಲದೆ ಬೇರೆ ಎಲ್ಲಾ ವ್ಯವಸಾಯಗಾರರು ಡಿ. ಎಸ್. ಪಿ. ಯೂ ವೀಲ್‌ಬಾರೂ ಸ್ಪ್ರೇಯರುಗಳನ್ನು ದಿನ ಒಂದರ ೮ ಗಂಟೆಯ ಕೆಲಸಕ್ಕೆ ದರಯಂತ್ರ ೧೦ ರ ೧–೮–೦ ರಂತೆಯೂ ಮತ್ತು ಅದೇ ರೀತಿ ಪವರ್ ಸ್ಪ್ರೇಯರುಗಳಿಗೆ ಮಿಶನ್ ೧೦ ರ ರೂ. ೪–೦–೦ ರಂತೆಯೂ ಕೊಡಗು ವ್ಯವಸಾಯ ಇಲಾಖೆಯಿಂದ ಪಡಕೊಳ್ಳಬಹುದು.

೨. ಡಿ. ಎಸ್. ಪಿ. ಸ್ಪ್ರೇ, ವೀಲ್‌ಬಾರೋ, ಪವರ್ ಸ್ಪ್ರೇಯರುಗಳಿಗಾಗಿ ಮುಂಚಿತವಾಗಿ ಸರ್ಕಲ್ ಆಫೀಸರುಗಳಿಗೆ ಅರ್ಜಿ ಬರೆದುಕೊಂಡಲ್ಲಾ ಸಮಯೋಚಿತವಾಗಿ ಕೊಡಲಾಗುವುದು.

೩. ಅಂತಹ ಅರ್ಜಿಗಳನ್ನು ಎರಡು ವಿಧಾನಗಳಲ್ಲಿ ವಿಂಗಡಿಸಲಾಗಿದೆ:–

(a) ಮುಂಗಾರು ಮಳೆಯು, ಕಾಫಿ, ಕಿತ್ತಳೆ ಮತ್ತು ಅಡಿಕೆಯ ಸ್ಪ್ರೇಯಿಂಗ್‌ಗಿರುವ ಅರ್ಜಿ,

(a) ಹಿಂಗಾರು ಮಳೆಯ ಸ್ಪ್ರೇಯಿಂಗ್‌ಗಿರುವ ಅರ್ಜಿ.

ಮುಂಗಾರು ಮಳೆಯ ಸ್ಪ್ರೇಯಿಂಗ್‌ಗಿರುವ ಅರ್ಜಿಯನ್ನು ಮಾರ್ಚಿ ೧೦ ರೊಳಗೆ ತಲಪಿಸತಕ್ಕದ್ದು.

೪. ಹಿಂಗಾರು ಮಳೆಯ ಸ್ಪ್ರೇಯಿಂಗ್‌ಗಿರುವ ಅರ್ಜಿಯನ್ನು ಆಗೋಸ್ತು ಒಂದರೊಳಗೆ ಕಳುಹಿಸತಕ್ಕದ್ದು.

೬. ವೃಥಾ ವಿಳಂಬ ಮಾಡಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ವ್ಯವಸಾಯ ಇಲಾಖಾ ಆಫೀಸರಿಗೆ ಯಾ ಅಸಿಸ್ಟೆಂಟು ವ್ಯವಸಾಯ ಅಫೀಸರ ಮನಸ್ಸಿಗೆ ತೃಪ್ತಿಯಾಗುವಂತೆ ವಿಳಂಬ ಮಾಡಿದಕ್ಕೆ ಸರಿಯಾದ ಕಾರಣಗಳನ್ನು ಕೊಟ್ಟರೆ ಅಂತಹ ಅರ್ಜಿಗಳಿಗೆ ಮನ್ನಣೆ ಕೊಡಲಾಗುವುದು.

೭ ಅನುಕ್ರಮವಾಗಿ ಏಳು ದಿನಗಳ ಬಾಡಿಗೆ ಮೊಬಲಗನ್ನು ಒಂದು ವಾರಕ್ಕೆ ಮೊದಲಾಗಿ ರೈತನಿಂದ ವಸೂಲು ಮಾಡಲಾಗುವುದು.

೮ ಸ್ಪ್ರೇಯರ್‌ಗಳನ್ನು ವ್ಯವಸಾಯದ ಡಿಪೋದಿಂದ ರೈತರ ಜವಿನಿಗೆ- ಸಾಗಿಸುವ ಮತ್ತು ಅಲ್ಲಿಂದ ಹಿಂದಕ್ಕೆ ತರಲಿಕ್ಕೆ ತಗಲುವ ಖರ್ಚನ್ನು ಆಯಾಯ ರೈತನಿಂದಲೇ ಕೊಡಬೇಕಾಗುವುದು.

೯. ಫೀಲ್ಡ್‌ಮೇನ್ ಯಾ ಡೆಮ್ಹಾನ್‌ಸ್ಟ್ರೇಶನ್ ಮೇಸ್ತ್ರಿಯರ ಅನುಮತಿ ಇಲ್ಲದೆ ಯಂತ್ರವನ್ನು ಉಪಯೋಗಿಸುವ ಯಾವ ಹಕ್ಕು ರೈತನಿಗೆ ಇರುವುದಿಲ್ಲ.

೧೦ ಯಂತ್ರವನ್ನು ಸುರಕ್ಷಿತವಾಗಿ ತಲಪಿಸುವ ಭಾರವು ರೈತನದೇ ಆಗಿರುತ್ತದೆ. ಮತ್ತು ಅಜಾಗರೂಕತನದಿಂದ ಯಂತ್ರಕ್ಕೆ ಏನಾದರೊಂದು ನಷ್ಟವಾದರೆ ಆ ನಷ್ಟಗಳೆಲ್ಲಾ ರೈತನೇ ಜವಾಬ್ದಾರಿಯಾಗತಕ್ಕದ್ದು. —ವ್ಯವಸಾಯ ಇಲಾಖೆ.

ಪ್ರಾಚೀನ ವಸ್ತು ಸಂಶೋಧನೆ.

ಲೇ:—ಶ್ರೀ. 'ಗಣೇಶ' ಮಡಿಕೇರಿ.

ಬ್ರಿಟಿಷರ ಆಳ್ವಿಕೆ ಪ್ರಾರಂಭವಾದನಂತರ ನಮ್ಮ ದೇಶದ ಇತರ ಕುಶಲ ಕಲೆಗಳೊಂದಿಗೆ ನಮ್ಮ ಹಿರಿಯ ಸಂಸ್ಕೃತಿ ಮತ್ತು ಚರಿತ್ರೆಯ ಗರ್ಭದ ಕಟ್ಟಡ ಸ್ಥೂಪಗಳೂ ಮೂಲೆಗೊತ್ತಲ್ಪಟ್ಟವು. ಬ್ರಿಟಿಷ್ ಪದ್ಧತಿಯೇ ನಾಗರೀಕತೆ ಎನಿಸಿ ಹಿಂದಿನ ಗತವೈಭವದ ವಿಚಾರ ಮಾತಾಡಿಕೊಳ್ಳುವದು ಅಸಂಗತವಾಗಿ ನಮ್ಮ ಆರ್ಶೇಯ ಹಿರಿಮೆ ಘನತೆಗಳನ್ನು ಹೇಳಿಕೊಳ್ಳುವದನ್ನು ಕಡಿಮೆಯೆಂದು ಭಾವಿಸಿದೆವು. ನಮ್ಮ ಪೌರಾಣಿಕ ಮತ್ತು ಚಾರಿತ್ರಿಕ ಸ್ಥಳಗಳನ್ನು ಕಡೆಗಣಿಸಿದೆವು ಪರಿಣಾಮವಾಗಿ ನಮ್ಮ ಹಿಂದಿನ ಸಂಸ್ಕೃತಿ, ನೀತಿರೀತಿಗಳೂ ಅವುಗಳಿಗೆ ಉದಾಹರಣೆಯಾದ ಮಂದಿರ ಸ್ಥೂಪಗಳೂ ಕಾಡು ಸೇರಬೇಕಾಯಿತು. ಹರಪ್ಪಾ, ಮೆಹಂಜದಾರೋ, ಅಜಂಟಾ ಮೊದಲಾದ ಕಡೆಯ ಶಿಲಾ ಶಾಸನಗಳೂ ಶಿಲ್ಪ ಕಲಾ ವೈಭವಗಳು, ಇಡೀ ಜಗತ್ತಿನ ದೃಷ್ಟಿಯನ್ನು ಅತ್ತ ಸೆಳೆದರೂ ಹಿಂದೂದೇಶದ ಉದ್ದಗಲಕ್ಕಿರುವ ಅನೇಕ ಚರಿತ್ರಾರ್ಹ ದೇವಾಲಯ, ಸ್ತೂಪ, ಮತ್ತಿತರ ಸ್ಥಳಗಳು ಮೂಲೆ ಸೇರಿದವು. ಆಮೇಲೆ ಸ್ವಾತಂತ್ರ್ಯ ದೊರೆತನಂತರ ಪ್ರಾಚೀನ ವಸ್ತು ಸಂಶೋಧನಾ (Archaeological Survey Dept.) ಇಲಾಖೆಯವರು ಚೇತರಿಸಿಕೊಂಡು ಕೆಲಸ ಪ್ರಾರಂಭಿಸಿರುವರು. ದಕ್ಷಿಣ ಹಿಂದೂಸ್ಥಾನದ ಕೇಂದ್ರವು ಮದರಾಸಿನ ಫೋರ್ಟ್ ಸೆಂಟ್ ಜಾರ್ಜ್ ಕಟ್ಟಡದಲ್ಲಿದೆ. ಇದರ ಸುಪರಿಂಟೆಂಡೆಂಟರು ತಾರೀಕು ೧೩ ರಲ್ಲಿ ಮಡಿಕೇರಿಗೆ ಬಂದಿದ್ದು ಅವರನ್ನು ಭೇಟಿಯಾದಾಗ ಅವರು ಕೊಡಗಿನ ವಿಚಾರದಲ್ಲಿ ತಮ್ಮ ಇಲಾಖೆಯ ಕರ್ತವ್ಯವನ್ನು ವಿವರಿಸಿದರು. ಕೊಡಗಿನಲ್ಲಿಯೂ ಪ್ರಾಚೀನ ಚರಿತ್ರಾರ್ಹ ಪ್ರಾಮುಖ್ಯ ಸ್ಥಳಗಳ ವಿಚಾರ ಯಾರಿಗೂ ಏನೂ ತಿಳಿದಿಲ್ಲ, ಸಮೂರು ಗಿಲಲಟ್ ರಲ್ಲಿ ಯೂರೋ ಒಬ್ಬ ಐರೋಪ್ಯರು ಮಾಡಿದ ಪಟ್ಟಿಯ ವಿನಹ ಈ ಮೂರ್ಗದಲ್ಲಿ ಯಾವುದೇ ಸಂಶೋಧನೆಯೂ ಆಗಿಲ್ಲ. ಕೊಡಗಿನಂಥಾ ಚಾರಿತ್ರಿಕ ನಾಡಿನಲ್ಲಿ ಅಂಥಾ ಚರಿತ್ರಾರ್ಹ ಸ್ಥಳಗಳಿಲ್ಲವೆಂದಲ್ಲ. ರಾಮಾಯಣ ಮಹಾಭಾರತದ ಕಾಲದಿಂದಲೇ ಇದರ ಕೀರ್ತಿ ಇದೆ. ಕಟ್ಟಿದ ಇಪ್ಪು ಮತ್ತು ಹೇರ್ಮಾಡುಗಳು ಶ್ರೀರಾಮಚಂದ್ರನಿಂದ ಪ್ರತಿಷ್ಠಾಪಿತವಾದ ಬಗ್ಗೆ ಉಲ್ಲೇಖನಗಳಿವೆಯಂತೆ. ಪಾಂಡವರು ಕೊಡಗನ್ನು ಸಂಚರಿಸಿದ ಚಿಹ್ನೆಗಳು ಇನ್ನೂ ಇವೆಯಂತೆ! ಅಲ್ಲದೆ ಚಾರಿತ್ರಿಕವಾದ ಅನೇಕ ಪ್ರದೇಶಗಳಿವೆ. ಪ್ರಾಚೀನ ವಸ್ತು ಸಂಶೋಧನಾ ಮತ್ತು ರಕ್ಷಣಾ ಇಲಾಖೆಯ ಸುಪರಿಂಟೆಂಡೆಂಟರು ಹೇಳಿದಂತೆ ಎಣೆಯಿಲ್ಲದ ಸುರ ಸೌಂದರ್ಯದಿಂದ ಒಪ್ಪುತ್ತಿರುವ ಕೊಡಗು ನಾಡಿನಲ್ಲಿ, ಜನರಲ್ ಕಾರ್ಯಪ್ಪನವರಂಥಾ ಸೇನಾನಿಯನ್ನು ಹೆತ್ತ ಕೊಡಗು ಮಾತೆಯ ಹಿರಿಯ ಗರ್ಭದಲ್ಲಿ ಬೆಳಕಿಗೆ ಬಾರದ ಅನೇಕ ಚಾರಿತ್ರಿಕ ವಸ್ತುಗಳಿರಬಹುದು. ಇವುಗಳನ್ನೆಲ್ಲಾ ಪರಿಶೋಧಿಸಲು ಕೊಡಗಿನಲ್ಲಿ ಒಂದು ಪ್ರಾಚೀನ ವಸ್ತು ಸಂಶೋಧನಾ ಕೆಲಸ ನಡೆಯಬೇಕಾಗಿದೆ. ನಮ್ಮ ಹಿರಿಯ ಚರಿತ್ರೆ ಸಂಸ್ಕೃತಿಗಳು ಭೂಗತವಾಗಿ ಕಾಲವಾಹಿನಿಯಲ್ಲಿ ಮರೆತು ಹೋಗದೆ ಮುಂದಿನ ಪೀಳಿಗೆಗೆ ಜ್ಞೇತನಕಾರಿಯಾಗಿರುವಂತೆ ರಕ್ಷಿಸಿಡುವದು ಕರ್ತವ್ಯವಾಗಿದೆ

ಶನಿವಾರಸಂತೆಯ ಬಳಿಯ ಜೈನ ದೇವಾಲಯಗಳು, ಸೋಮವಾರಪೇಟೆಯ ಹತ್ತಿರದ 'ಡಾಲ್‌ಮನ್ಸ್ ಸರ್ಕಲ್' ಮಡಿಕೇರಿಯ ರಾಜಾಸೀಟ್, ಕೋಟೆ, ದಕ್ಷಿಣ ಕೊಡಗಿನ ಅನೇಕ ಪ್ರಾಮುಖ್ಯ ಸ್ಥಳಗಳ ವಿಚಾರ ಅವರು ಹೇಳಿದರು. 'ರಾಜಾಸೀಟನ ರೂಪುಗೆಡಿಸುವಂತೆ ಮನೆ ಕಟ್ಟಿರುವ ವಿಚಾರಕ್ಕೆ ಅವರು ವ್ಯಸನಪಟ್ಟುದಲ್ಲದೆ ಹಳೆಯ ಕೀರ್ತಿ ಪಡೆದ ಸ್ಥಳಗಳಲ್ಲಿ ಹೊಸ ಕಟ್ಟಡ ಕಟ್ಟಲು ಅನುಮತಿ ಕೊಡುವಾಗ ಆಲೋಚಿಸಿ ಕೊಡಬೇಕೆಂದರು. ಆದ್ದರಿಂದ ಈ ವಿಚಾರ ಜನತೆಯಲ್ಲಿ ಸಾಕಷ್ಟು ಪ್ರಚಾರ ಮಾಡಿ ಮತ್ತು ಇಲ್ಲಿಯ ಪ್ರಾಮುಖ್ಯ ಚಾರಿತ್ರಿಕ ಸ್ಥಳಗಳನ್ನು ಗುರ್ತಿಸಿ ಅವುಗಳನ್ನು ರಕ್ಷಿಸುವ ಬಗ್ಗೆ ಯೋಗ್ಯರೀತಿಯ ಒಂದು ಪರಿಶೀಲನೆ ಆಗಬೇಕು. ಇಂಡಿಯಾ ಸರಕಾರದ ಪ್ರಾಚೀನ ವಸ್ತು ಶೋಧನಾ ಮತ್ತು ಸಂರಕ್ಷಣಾ ಇಲಾಖೆಯವರು ಈ ಬಗ್ಗೆ ಪರಿಶೋಧನೆ ನಡೆಸುವರೆಂದೂ, ಇಂಥಾ ಪ್ರಾಮುಖ್ಯ ಸ್ಥಳಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುವರೆಂದೂ ಆಶಿಸಲಾಗಿದೆ.

ಕೊ ಡ ಗು

ತಾ. ೧೭–೩–೧೯೫೦ನೇ ಶುಕ್ರವಾರ

ಪೂರ್ವ ಬಂಗಾಳ.

ಇಲ್ಲಿ ಪಾಕಿಸ್ತಾನವು ಅನುಸರಿಸುತ್ತಿರುವ ನೀತಿಯು ಭಾರತೀಯರಿಗೆ ದುಃಖದಾಯಕವಾಗಿದೆ. ಪೂರ್ವ ಬಂಗಾಳವು ಅಲ್ಪ ಸಂಖ್ಯಾಕರ ನಿತ್ಯ ನರಕವಾಗಿ ಪರಿಣಮಿಸಿದೆ ಮತದ ತಳಹದಿಯಲ್ಲಿ ರಚಿಸಲ್ಪಟ್ಟ ಪಾಕಿಸ್ತಾನವು ಪಶ್ಚಿಮದಲ್ಲಿ ಹಿಂದೂಗಳಿಗೆ ವಿಪರೀತ ಕಿರುಕುಳಕೊಟ್ಟು ಲಕ್ಷಾಂತರ ಸಂಖ್ಯೆಯಿಂದ ಹಿಂದುಗಳು ನಿರಾಶ್ರಿತರಾಗಿ ಭಾರತಕ್ಕೆ ಬರಬೇಕಾಯಿತು. ಅವರಿಗೆ ಯೋಗ್ಯ ವಸತಿ, ಜೀವನೋಪಾಯ ಏರ್ಪಡಿಸುವ ಕಾರ್ಯ ಇನ್ನೂ ಪೂರ್ತಿಯಾಗಿಲ್ಲ. ಅಷ್ಟರಲ್ಲಿ ಪೂರ್ವ ಬಂಗಾಳದಲ್ಲಿ ಅದೇ ರೀತಿಯ ಪಿಡುಗು ಪ್ರಾರಂಭವಾಗಿದೆ. ಹಿಂದುಗಳು ಸಾವಿರ ಸಂಖ್ಯೆಯಿಂದ ಭಾರತಕ್ಕೆ ಬರತೊಡಗಿದ್ದಾರೆ. ಪಶ್ಚಿಮ ಪಾಕಿಸ್ತಾನದಿಂದ ಒಹುತೇಕ ಹಿಂದುಗಳನ್ನು ಓಡಿಸಿದಂತೆ ಪೂರ್ವ ಬಂಗಾಳದಿಂದಲೂ ಅವರನ್ನು ಹೊರ ಅಟ್ಟುವ ಪ್ರಯತ್ನ ನಡೆಯುತ್ತಿದೆ. ಈ ಪ್ರಯತ್ನದಲ್ಲಿ ಕೊಲೆ, ದರೋಡೆ, ಮಾನಾಪಹರಣಗಳು ಹಿಂದಿನಂತೆಯೇ ನಡೆದಿವೆ.

ಈ ದುಃಖದಾಯಕ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ ಯೋಗ್ಯ ಸಹಾಯ ಮಾಡಲು ಪಂಡಿತ ಜವಾಹರರು ಕಲ್ಕತ್ತಕ್ಕೆ ಪುನಃ ಹೋಗಿದ್ದಾರೆ. ನಿರಾಶ್ರಿತರಾಗಿ ಬರುವವರ ದುಃಖ ನಿವಾರಣೆಗಾಗಿ ಸಕಲ ಪ್ರಯತ್ನವನ್ನು ಸರಕಾರ ಮಾಡುತ್ತಿದೆ. ಇದು ಒಬ್ಬಿಬ್ಬ ವ್ಯಕ್ತಿಗಳಿಂದ ನಡೆಯುವ ಕೆಲಸವಲ್ಲ ಸರಕಾರಕ್ಕೆ ಸರ್ವರ ಬೆಂಬಲ ದೊರೆಯಬೇಕು. ಈ ದೃಷ್ಟಿಯಿಂದ ಪಂಡಿತ ನೆಹರೂರವರು ಜಯಪ್ರಕಾಶ ನಾರಾಯಣನ್ನು ಆಹ್ವಾನಿಸಿ ಸದ್ಯದ ಬಿಕ್ಕಟ್ಟನ್ನು ಒಗ್ಗಟ್ಟಿನಿಂದ ಎದುರಿಸುವ ಮಾತುಕತೆ ನಡೆಸಿರುವುದು ಯುಕ್ತವಾದುದು.

ಪಾಕಿಸ್ತಾನದ ಈವರೆಗಿನ ಕಾರ್ಯಕಲಾಪಗಳನ್ನು ನೋಡಿದರೆ ಅಂತರಾಷ್ಟ್ರೀಯ ದೃಷ್ಟಿಯಿಂದ ಮತ್ತು ತನ್ನ ಜಗತ್ಶಾಂತಿಯ ಉದಾತ್ತ ಧ್ಯೇಯದ ಕಾರಣದಿಂದ ಯಾವುದೇ ಸಾರಲಾರದ ಭಾರತದ ಪರಿಸ್ಥಿತಿಯನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳಲು ಅದು ಪ್ರಯತ್ನಿಸುತ್ತಿಲ್ಲವೆಂದು ತಿಳಿಯುವುದಿಲ್ಲ. ಭಾರತವನ್ನು ಯುದ್ಧಕ್ಕೆಳೆಸಲು ಪಾಕಿಸ್ತಾನದ ಕೃತ್ಯಗಳು ಪ್ರೋತ್ಸಾಹಿಸುತ್ತಿವೆಯೆಂದಾಗಲಿವರು ಹೇಳುತ್ತಿರುವಂತೆ ಪಾಕಿಸ್ತಾನದ ಮೇಲೆ ಯುದ್ಧ ಸಾರಿ ತಕ್ಕ ಪಾಠ ಕಲಿಸಲೇಕೆನ್ನುವವರಲ್ಲಿ ಆರ್ಥವಿಲ್ಲ. ಭಾರತವು ತನ್ನ ಆತ್ಮರಕ್ಷಣೆಯ ಬಗ್ಗೆ ಸದಾ ಸನ್ನದ್ಧವಿರಬೇಕು. ಅದರೆ ಇನ್ನೊಬ್ಬರ ಮೇಲೆ ಯುದ್ಧ ಪ್ರಯತ್ನಿಸಲು ಅದು ತಯಾರಾಗದು.

ಭಾರತದ ಆಂತರಿಕ ಸ್ವಾಸ್ಥ್ಯದ ದೃಷ್ಟಿಯಿಂದಲೂ ಯುದ್ಧ ಕೂಡದು. ಭಾರತದೊಳಗಿರುವ ವಿರಾಜಶಕ್ತಿಗಳು ಇನ್ನೂ ಪೂರ್ಣ ಅಡಗಿಲ್ಲವೆಂದು ಕಾಂಗ್ರೆಸ್ ಸರಕಾರದ ಮೇಲೆ ನಡೆಯುತ್ತಿರುವ ಅಪಪ್ರಚಾರಕ್ಕೆ ಯುದ್ಧ ಪರಿಸ್ಥಿತಿಯು ಹೆಚ್ಚಿನ ಪ್ರಜೋದನೆ ಕೊಟ್ಟು ಭಾರತದ ಸ್ಥಿತಿಯು ಚೈನಾ, ಬರ್ಮಾ ಗಳಂತಾಗಬಹುದು. ಆದ್ದರಿಂದ ಪಾಕಿಸ್ತಾನದ ವಿರುದ್ಧ ಯುದ್ಧ ಒಂದನ್ನುಳಿದು ಉಳಿದ ಎಲ್ಲಾ ಉಗ್ರ ಕಾರ್ಯ ಕಲಾಪಗಳನ್ನು ಕೇಂದ್ರ ಸರಕಾರವು ಕೈಗೊಳ್ಳಬೇಕು. ನಮ್ಮ ಸಹೋದರರ ಕೊಲೆ, ಅಪಮಾನವಾಗಿ ಜೀವಿಸುವದೇ ಕಷ್ಟವಾಗಿರುವಾಗ ಯಾವ ಸರಕಾರವೂ ಕೈಕಟ್ಟಿ ಕೂರಲು ಸಾಧ್ಯವಿಲ್ಲ.

ನಿರಾಶ್ರಿತರಾಗಿ ಬರುವವರಿಗೆ ಭಾರತದ ಬಾಗಿಲು ತೆರೆದಿರುವದು. ದೇಶದೊಳಗಿನ ಜಾತೀಯ ಶಾಂತಿ ಕದಡದಂತೆ ಭಾರತವು ಎಚ್ಚರದಿಂದಿರುವುದು.

ಪೂರ್ವ ಬಂಗಾಳದಲ್ಲಿರುವ ಹಿಂದೂಗಳನ್ನೆಲ್ಲಾ ತರಿಸಿಕೊಳ್ಳುವ ಸೂಚನೆಯು ಹಲವೆಡೆಗಳಲ್ಲಿ ಮಾಡಲ್ಪಟ್ಟಿದೆ. ಅವರನ್ನು ಕರೆಸಿಕೊಂಡು ಅವರಷ್ಟೇ ಮುಸ್ಲಿಮರನ್ನು ಇಲ್ಲಿಂದ ಅಲ್ಲಿಗೆ ಕಳುಹಿಸುವದೆಂದೂ ಅದು ಸಾಧ್ಯವಿಲ್ಲದಿದ್ದರೆ ಅವರಿಗೆ ಬೇಕಾಗುವಷ್ಟು ಭೂಪ್ರದೇಶವನ್ನು ಪಾಕಿಸ್ತಾನದಿಂದ ಪಡೆಯ ಬೇಕೆಂದೂ ಸೂಚನೆಗಳಿವೆ. ಈ ಸೂಚನೆಗಳಿಗೆ ಪಾಕಿಸ್ತಾನ ಒಪ್ಪಬಹುದೋ ಎಂಬುದು ಸಂಶಯದ ಮಾತು. ಈ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ತರಬೇಕೆಂಬ ಕೆಲವರ ಸೂಚನೆ ಇದೆ. ಇದರಿಂದ ತಕ್ಕ ನಿರ್ಣಯ ಮೊರೆತೀತೆಂದು ಕಾಶ್ಮೀರದ ಕಟು ಅನುಭವವಿರುವ ಮೂರೂ ಹೆಳಲಾರರು. ಭಾರತವು ಈ ರೀತಿ ಕಷ್ಟ ಪರಿಸ್ಥಿತಿಯಲ್ಲಿದೆ. ಆದರೆ ತಾಳ್ಮೆಯನ್ನು ನಿರ್ಬಲತೆಯೆಂದು ಪಾಕಿಸ್ತಾನ ಭಾವಿಸಿದಂತಿದೆ. ಆದರೂ ಭಾರತವು ಹಿಂಸಾತ್ಮಕ ಮಾರ್ಗ ತುಳಿಯದೆ ತನ್ನ ಆದರ್ಶ ಮಾರ್ಗದಿಂದ ಸಾಗುವದು. ಅದು ಬಳಸಿನ ದಾರಿ ಹೌದು ಆದರೆ ಅದೇ ಚಿರಶಾಂತಿಯನ್ನು ತರಬಲ್ಲ ಮಾರ್ಗವೆಂಬುದನ್ನು ಮೂರೂ ಮರೆಯುವಂತಾಗದು. ಇಂದಿನಂಥಾ ಬಿಕ್ಕಟ್ಟಿನ ಸಂದರ್ಭದಲ್ಲಿ ಕೇಂದ್ರ ಸರಕಾರಕ್ಕೆ ಪೂರ್ಣ ಬೆಂಬಲವನ್ನಿತ್ತು ಅದರ ಕೈಯನ್ನು ಬಲಪಡಿಸುವದು ಪ್ರತಿಯೊಬ್ಬ ಪ್ರಜೆಯು ಆದ್ಯ ಕರ್ತವ್ಯ.

ವರ್ತಮಾನ.

ಡಾಕ್ಟರ್ ಮುಕ್ಕಾಟಿರ ಎಂ. ಚಂಗಪ್ಪನವರು ವೀರಾಜಪೇಟೆಯಲ್ಲಿ ತಮ್ಮ ಸ್ವಂತ ಆಸ್ಪತ್ರೆಯನ್ನು ತೆರೆದಿರುವರು.

ನಿವೃತ್ತರಾಗಲಿರುವ ಕೊಡಗಿನ ಚೀಫ್ ಕಮಿಷನರ್ ಶ್ರೀ. ಸಿ. ಟಿ. ಮುದ್ದಲಿಯರ್ ಇವರಿಗೆ ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ತಾ. ೧೫ ರಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿ ಬೀಳ್ಕೊಟ್ಟರು.

ತಾ. ೨೭–೩–೫೦ ನೇ ಸೋಮವಾರ ಭಗವಂಡ್ಲದ ಶ್ರೀರಾಮಮಂದಿರದಲ್ಲಿ ರಾಮನವಮಿ ಉತ್ಸವವನ್ನು ಶ್ರೀ. ಸ್ವಾಮಿ ಸೋಮನಾಥನಂದಜಿಯವರ ಅಧ್ಯಕ್ಷತೆಯಲ್ಲಿ ನಡೆಯುವರಾಗಿ ತಿಳಿಯಬರುತ್ತದೆ.

ಸ್ಕೂಲ್ ಫೈನಲ್ ಪರೀಕ್ಷೆಯು ತಾ. ೧೫–೩–೫೦ ರಿಂದ ಪ್ರಾರಂಭವಾಗಿದೆ.

ನಾಗರೀಕರ ಆರೋಗ್ಯಕ್ಕೆ ಹಾನಿತರುವಂಥಾ ಅಂದರೆ ಶೇಕಡ ೬೬ ರಷ್ಟು ನೀರು ಮಿಶ್ರಿತ ಹಾಲು ನೂರಾಟ ಮೂಡುತ್ತಿದ್ದರಿಂದ ಮಡಿಕೇರಿಯಲ್ಲಿ ಹಾಲು ವ್ಯಾಪಾರ ಮಾಡುವ ಶ್ರೀಗಳಾದ ಪಾಂಡೀರ ಬೋಪಯ್ಯ, ಕೃಷ್ಣ, ಜನಾಬ್ ಅಬುಬಕರ್ ಇವರು ಮೂರು ಜನರ ಹಾಲನ್ನು ಮಡಿಕೇರಿ ಮುನ್ಸಿಪಾಲಿಟಿ ಸ್ಯಾನಿಟರಿ ಇನ್ಸ್‌ಪೆಕ್ಟರವರು ತಾ. ೧೪ ರಲ್ಲಿ ಹಿಡಿದು ಕೋರ್ಟಿಗೆ ಹಾಜರ್ಪಡಿಸಿ ಅಂಥಾ ಹಾಲು ಮಾರಕೂಡದೆಂದು ಎಚ್ಚರಿಸಿ ಆ ಹಾಲನ್ನು ನಾಶಮಾಡಲಾಯಿತೆಂದು ತಿಳಿಯುತ್ತೇವೆ.

ಕಳೆದ ಫೆಬ್ರವರಿ ತಾರೀಕು ೩೪ ನೇ ಶುಕ್ರವಾರ ದಿನ ಪೊನ್ನಂಪೇಟೆ ಹೈಯರ್ ಎಲಿಮೆಂಟರಿ ಶಾಲೆಯ ಸ್ಕೌಟು ದಳದವರು ಇರ್ಪಿಗೆ (ಬ್ರಹ್ಮಗಿರಿ ಬೆಟ್ಟಕ್ಕೆ) ವಿಹಾರಾರ್ಥ ಹೋಗಿದ್ದರೆಂದೂ, ಆಗ ಅವರನ್ನು ಶ್ರೀಗಳಾದ ಅಜ್ಜನಮಾಡ ಕೆ. ನಂಜಪ್ಪ, ಅಜ್ಜಮಾಡ ಎಸ್. ಚಂಗಪ್ಪ ಮತ್ತು ತೀತೀರ ಎಂ. ನಂಜಪ್ಪ ಇವರುಗಳು ಸತ್ಕರಿಸಿದರೆಂದೂ ಅಲ್ಲಿನ ಸ್ಕೌಟ್ ಅಧ್ಯಾಪಕರು ತಿಳಿಸುತ್ತಾರೆ.

ತಾ. ೮–೩–೫೦ ರಲ್ಲಿ ಹಾಸನ ಡಿಟಿಕ್ಟಿವ್ ಕಾಫಿ ಇನ್ಸ್‌ಪೆಕ್ಟರ್ ಆದ ಶ್ರೀ ಪಟ್ಟಡ ಐಯ್ಯಪ್ಪನವರು, ಅಲ್ಲಿಂದ ೨೦ ಮೈಲಿ ದೂರದ ಒಂದು ಹಳ್ಳಿಯಲ್ಲಿ ಕಾಳ ಸಂತೆಗೆಂದು ಸಿದ್ಧಪಡಿಸಿ ದಾಸ್ತಾನು ಮಾಡಿದ್ದ ಸುಮಾರು ೨೫೦೦ ರೂ. ಬೆಲೆ ಬಾಳುವ ೩೩ ಚೀಲ (೯೯ ಬುಷಲ್) ಕಾಫಿಯನ್ನು ಪತ್ತೆ ಹಚ್ಚಿ ಕ್ರಮ ಜರುಗಿಸಿದರು.

ಕೊಡಗಿನ ಚೀಫ್ ಕಮಿಷನರಾಗಿ ನೇಮಕವಾಗಿರುವ ಲೆ ಕರ್ನಲ್ ದಯಾ ಸಿಂಗ್ ಬೇಡಿಯವರು ತಾರೀಕು ೨೦ ರಲ್ಲಿ ಬೆಂಗಳೂರಿನಿಂದ ಕಾರಿನಲ್ಲಿ ಬರುವರೆಂದೂ ಸಾಧ್ಯವಾದರೆ ಅದೇ ದಿನ ಇಲ್ಲಪೇ ಮೊರಣೆ ದಿನ ಚಾರ್ಜು ವಹಿಸಿಕೊಳ್ಳುವರೆಂದೂ ತಿಳಿದು ಬಂದಿದೆ.

ದಕ್ಷಿಣ ಹಿಂದೂಸ್ಥಾನದ ರೀಜನಲ್ ಫುಡ್ ಕಮಿಷನರಾದ ಶ್ರೀ ಎಸ್. ಮಹಬೂಬ್ ಮಿಯಾನ್‌ರವರು ಮದ್ರಾಸಿನಿಂದ ಈ ತಾ. ೧೧ರಲ್ಲಿ ಕೊಡಗಿಗೆ ಬಂದು, ಇಲ್ಲಿ ಅತ್ತ ಸಂಗ್ರಹಿಸುವ ಏರ್ಪಾಡನ್ನೂ ಮತ್ತು ಮಿಲ್ಲುಗಳಿಂದ ಅಕ್ಕಿ ತಯಾರಿಸುವ ಏರ್ಪಾಡನ್ನೂ ನೋಡಿಕೊಂಡು ತಾ. ೧೨ ರಲ್ಲಿ ಹೊರಟು ಹೋದರು.

ಪೊನ್ನಂಪೇಟೆ ನಾಡು ಮಂತ್ರಿರು ದೇವಸ್ಥಾನವು ಪಬ್ಲಿಕ್ ದೇವಸ್ಥಾನವಲ್ಲವೆಂದು ಚೀಫ್ ಕಮಿಷನರವರು ಹುಕುಂ ಮಾಡಿರುವರೆಂದು ತಿಳಿಯಬರುತ್ತದೆ.

ಆ. ಕಮಿಷನರವರು ತಾ. ೧೫ ರಲ್ಲಿ ವೀರಾಜಪೇಟೆಯಲ್ಲಿ ಕೊಡಗಿನ ಅಕ್ಕಿ ಗಿರಣಿ ಮಾಲೀಕರ ಪ್ರತಿನಿಧಿಗಳನ್ನೂ, ಬೆಳೆಸುವವರ ಕೆಲವು ಪ್ರಮುಖರನ್ನೂ ಸೇರಿಸಿ ಅಭಿಪ್ರಾಯ ತೆಗೆದು ಗಿರಣಿ ಮಾಲೀಕರು ಈ ಮೊದಲಿನಂತೆ ಬೆಳೆಸುವವರಿಂದ ಯೂಸಬ್ ಏಜೆಂಟರಿಂದ ಒತ್ತುವನ್ನು ನೇರವಾಗಿ ಕೊಂಡುಕೊಳ್ಳಬಹುದೆಂದೂ ಪೂಲಿಂಗ್ ಕ್ರಮವನ್ನು ಜಾರಿಗೆ ತರಬಾರದೆಂದೂ ತೀರ್ಮಾನಿಸಿರುವರಾಗಿ ತಿಳಿಯಬರುತ್ತದೆ.

ವಿಚಿತ್ರ

ತಾ. ೯–೩–೫೦ ರಲ್ಲಿ ಮೂಯಮುಡಿ ಗ್ರಾಮದ ಕಮಟಿ ಮಹದೇವರ ಭಂಡಾರ ಪೆಟ್ಟಿಗೆಯನ್ನು ದೇವರ ಕೊಡಿಮರನಿಲ್ಲುವ ದಿನ ದೇವಸ್ಥಾನಕ್ಕೆ ತಂದು ತೆರೆದು ನೋಡುವಾಗ್ಗೆ ದೇವರ ಅಂದಾಜು ಮುನ್ನೂರು ರೂಪಾಯಿಯು ನಗಗಳು ಅಪರಿಚಿತವಾಗಿದ್ದವೆಂದೂ ಅಲ್ಲಿ ಎಷ್ಟು ವ್ಯಕ್ತಿಗಳ ಮೇಲೆ ಎಷ್ಟು ದೇವರು ಬರುತಿದ್ದು ಗ್ರಾಮಸ್ಥರು ಆ ದೇವರನ್ನು ಕೇಳುವಾಗ್ಗೆ ಕದ್ದ ಸಾಮಾನುಗಳೆಲ್ಲವು ಕರಗಿಸಲ್ಪಟ್ಟಿದೆಯೆಂದೂ ಮತ್ತೆ ಕೆಲವನ್ನು ಬಟ್ಟೆಯಲ್ಲಿ ಗಂಟುಕಟ್ಟಿ ಒಂದು ಮರದ ಬುಡದಲ್ಲಿ ಬಿಲದೊಳಗೆ ಇಟ್ಟಿದ್ದಾರೆಯೆಂದೂ ಹೇಳುತಂತೆ! ನೀವೇ ಅದನ್ನು ತೋರಿಸಿಕೊಡಬೇಕೆಂದು ಗ್ರಾಮಸ್ಥರು ಕೇಳಿದರೆಂದೂ ದೇವರು ಸ್ನಾನಮಾಡಿ ಬರುವಾಗ ದೇವರ ವಿಗ್ರಹ ತೆಗೆದುಕೊಂಡಿದ್ದ ಬ್ರಾಹ್ಮಣನ ಮೈಮೇಲೆ ಬಂದು ಕಾಡಿನೊಳಗೆ ನುಗ್ಗಿ ಸುಮಾರು ಒಂದು ಮೈಲು ದೂರದಲ್ಲಿ ಒಂದು ಮರದ ಬುಡದಲ್ಲಿ ಒಂದು ಹುತ್ತವನ್ನು ತೋರಿಸಿ ಅದಕ್ಕೆ ಕೈಹಾಕಿರೆಂದು ಹೇಳಿತೆಂದೂ ಕೈಹಾಕಿ ನೋಡುವಾಗ್ಗೆ ಬಟ್ಟೆಯಲ್ಲಿ ಗಂಟುಮಾಡಿ ಇಟ್ಟಿದ್ದ ಕೆಲವು ಸಾಮಾನುಗಳು ಸಿಕ್ಕಿದವೆಂದೂ ಗ್ರಾಮಸ್ಥರೊಬ್ಬರು ತಿಳಿಸುತ್ತಾರೆ.

ಗಮನಕ್ಕೆ ತರಗತಿ

ಈ ವರ್ಷದ ಗಮಕ (ಭಾರತವಾಚನ) ತರಗತಿಯು ಮಡಿಕೇರಿಯಲ್ಲಿ ಏಪ್ರಿಲ್ ೧ನೇ ತಾರೀಖಿನಿಂದ ಆರಂಭವಾಗಿ ೬ ತಿಂಗಳ ಕಾಲ ನಡೆಯುವುದು. ಗಮಕ ಶಿಕ್ಷಣ ಪಡೆಯಲು ಇಚ್ಛೆಯುಳ್ಳವರು ಶ್ರೀ ಎಂ. ಎಸ್. ಅನಂತಪದ್ಮನಾಭರಾಯರಿಗೆ ಬರೆಯುವುದು. ಪ್ರವೇಶ ಉಚಿತ.

ನಿಯಮಗಳು—ಶಾರೀರ ಶುದ್ಧತೆ ಉಳ್ಳವರಾಗಿದ್ದು ಸ್ವಲ್ಪವಾದರೂ ಸಂಗೀತ ಮತ್ತು ಕನ್ನಡ ಸಾಹಿತ್ಯ ಜ್ಞಾನವುಳ್ಳವರಾಗಿರಬೇಕು. IV ಫಾರಂ ತರಗತಿಗೆ ಕೆಳಗಿನವರನ್ನು ತೆಗೆದುಕೊಳ್ಳಲಾಗುವುದಿಲ್ಲ.

ವಾರ್ತೆಗಳು:

ಪೂರ್ವ ಪಾಕಿಸ್ತಾನದ ಮಿಲಿಟರಿ ಸೇವೆಗೆ ಸೇರಿದವರೆಂದು ಬರ್ಹಾಮ್‌ಪುರದಲ್ಲಿ ಕಳೆದ ವಾರ ೬ ಜನ ಮುಸಲ್ಮಾನರನ್ನು ಸೆರೆಹಿಡಿಯಲ್ಪಟ್ಟಿತು. ೧೧ ಜನರ ಒಂದು ಗುಂಪು ಸಂಶಯಿತ ರೀತಿಯಲ್ಲಿ ಅಡ್ಡಾಡುತಿದ್ದುದರಿಂದ ಹಳ್ಳಿಗರು ಮತ್ತು ಪೊಲೀಸರು ಅವರನ್ನು ಬೆನ್ನಟ್ಟಿ ಅವರಲ್ಲಿ ೬ ಜನರನ್ನು ಹಿಡಿದರು. ಬಂಧಿತರಲ್ಲಿ ಅಕ್ಷೇಪಾರ್ಹ ಕಾಗದ ಪತ್ರಗಳು ದೊರೆತಿವೆ.

ಕೇಂದ್ರ ಶಾಸನ ಸಭೆಯಲ್ಲಿ ಒರಿಸ್ಸಾದ ಹೊಸ ರಾಜಧಾನಿಯನ್ನು ಕಟ್ಟಲು ೫೪೦ ಲಕ್ಷ ರೂಪಾಯಿ ವೆಚ್ಚವಾಗಲಿದ್ದು ಭಾರತ ಸರಕಾರವು ಅದಕ್ಕಾಗಿ ೧೩೨ ಲಕ್ಷ ರೂಪಾಯಿ ಕೊಡುತ್ತದೆ ಎಂದು ಅರ್ಥಸಚಿವರು ಸಂಸತ್ತಿನಲ್ಲಿ ಹೇಳಿದರು.

ಓದುಗರ ಓಲೆಗಳು.

ಶಾಲೆಗಳು ಮತ್ತು ಮತಪ್ರಚಾರ.

ಶಾಲೆಗಳು ಮತ ಪ್ರಚಾರದ ಕೇಂದ್ರ ಗಳಾಗಬಾರದು. ವಿದ್ಯೆಯು ಜಾತಿ ಮತಗಳ ಕೆಸರಿನಲ್ಲಿ ಹೂತಿರ ಬಾರದು. ನಮ್ಮ ಕೇಂದ್ರ ಸರಕಾರವು ಈ ತತ್ವವನ್ನು ಅನುಸರಿಸಿ ಹಿಂದೂದೇಶವನ್ನು ಜಾತ್ಯಾತೀತ ರಾಷ್ಟ್ರವೆಂದು ಸಾರಿರುವಾಗ ಕೊಡಗಿನ ಕೆಲವು ಶಾಲೆಗಳಲ್ಲಿ ಮತ ಭ್ರಾಂತಿ, ಸಂಕೀರ್ಣ ಮನೋಭಾವಗಳು ತುಂಬಿರುವದು ವಿಷಾದಕರ. ನಾನು ಕ್ರೈಸ್ತಿಯನ್ ಮಿಶನರಿ ಶಾಲೆಯೊಂದರಲ್ಲಿ ಓದುತ್ತಿರುವೆನು. ಈ ಶಾಲೆಯಲ್ಲಿ ಕ್ರೈಸ್ತ ಧರ್ಮ ಪ್ರಚಾರ ನಿರಾತಂಕವಾಗಿ ನಡೆಯುತಿದೆ. ಅದಕ್ಕೆ ನನ್ನ ವಿರೋಧವಿಲ್ಲ. ಅದರಂತೆ ಇತರ ಧರ್ಮಗಳಿಗೂ ಅನುವಿರ ಬೇಡವೇ? ಪರೀಕ್ಷೆ ಹತ್ತಿರ ಬಂದ ಕಾರಣ ಶಾಲೆ ವಿದ್ಯಾರ್ಥಿನಿಯರಾದ ನಾವು ಶಾರದಾಪೂಜೆಯೊಂದನ್ನು ನಮ್ಮ ನೇ ಖರ್ಚಿನಿಂದ ಮಾಡಬೇಕೆಂದು ನಿಶ್ಚಯಿಸಿದೆವು. ಈ ಶಾಲೆಯ 'ಕನ್ಯಾ ಸ್ತ್ರೀಯರು' (Nuns) ಸಿಟ್ಟಿಗೆದ್ದರು. ಸ್ಥಳ ಕೊಡಲಿಲ್ಲ. ಕಡೆಗೆ ನಾವು ಹತ್ತಿರದ ಮರದ ಕೆಳಗೆ ಸಂತೋಷದಿಂದ ಪೂಜೆ ನೆರವೇರಿಸಿದೆವು. ಈ ರೀತಿಯ ಚಿಕ್ಕ ದೃಷ್ಟಿ ಶಾಲಾ ಅಧಿಕಾರಿಗಳಿಗೇಕೆ? ಅಲ್ಲೂ ಇಂದಿನಂಥಾ ಪರಿಸ್ಥಿತಿಯಲ್ಲಿ, ಜಾತ್ಯಾತೀತ ಭೂತ ಖಂಡದಲ್ಲಿ ತಮ್ಮ ಮತವೇ ಬದುಕಬೇಕು; ಇತರ ಧರ್ಮಗಳಿಗೆಡೆಯಿಲ್ಲವೆಂಬ ಚಿಕ್ಕ ದೃಷ್ಟಿ ಏಕೆ? ಕ್ರೈಸ್ತನ ಹೆಸರಿನಲ್ಲಿ ಈ ಅನ್ಯಾಯವಾಗಬೇಕೆ? ಇನ್ನಾದರೂ ಸಂಬಂಧಿಸಿದವರು ಕಣ್ತೆರೆದು ಆಧುನಿಕ ವಿಚಾರವಾಹಿನಿಯನ್ನು ಗುರ್ತಿಸಿ ಅದಕ್ಕನುಗುಣ ಪರಿವರ್ತನಗೊಳ್ಳಬೇಡವೇ?

'ನೊಂದ ವಿದ್ಯಾರ್ಥಿನಿ'

ಟೊಳ್ಳು ಪರೀಕ್ಷೆ.

'ವಿದ್ಯಾರ್ಥಿಯ ವಿದ್ಯಾಯೋಗ್ಯತೆಯನ್ನು ಅಳೆಯಲು ಪರೀಕ್ಷೆಗಳು ಸಹಾಯಕವಲ್ಲವೆಂಬ ವಾದ ಇದೆ. ಆದ್ದರಿಂದ ಪರೀಕ್ಷೆಗಳನ್ನೇ ರದ್ದುಗೊಡಬೇಕೆಂಬ ಚಳವಳಿ ಎದ್ದಿದೆ. ಈ ಚಳವಳಿಯು ಜಯಪ್ರದವಾಗಬೇಕು; ಪರೀಕ್ಷೆಗಳು ರದ್ದಾಗಿ ಶಾಲೆಯಲ್ಲಿ ವಿದ್ಯಾರ್ಥಿಯು ಒಂದು ವರ್ಷದವರೆಗೆ ತೋರಿಸಿದ ಪ್ರಗತಿ, ನಡೆನುಡಿಗಳ ಮೇಲೆ ಆತನನ್ನು ಮೇಲಿನ ತರಗತಿಗೆ ಸೇರಿಸುವಂತಾಗಬೇಕು. ನಾನೂ ವಿದ್ಯಾರ್ಥಿಯೂಗಿರುವನು. ಈಗ ಪರೀಕ್ಷೆ ಹತ್ತಿರ ಬಂದಿರುವದರಿಂದ ವಿದ್ಯಾರ್ಥಿಗಳಲ್ಲಿ ಹಲವರು ಓದುವ ಬದಲು ಚಿಕ್ಕ ಚಿಕ್ಕ ನೋಟ್ ಪುಸ್ತಕಗಳನ್ನು ಪೂಡಿ ಪ್ರಾಮುಖ್ಯ ವಿಚಾರಗಳನ್ನೆಲ್ಲಾ ಅದರಲ್ಲಿ ಬರೆಯುತ್ತಿರುವರು! ಪರೀಕ್ಷೆಯಲ್ಲಿ ಇದರ ಸಹಾಯದಿಂದ ಪಾಸಾಗುವದೇ ಅಪರವರ್ಗ. ಈ ರೀತಿ ನಕಲು ತೆಗೆಯುವ ಪ್ರವೃತ್ತಿ ಈಗೀಗ ಬಹು ಹೆಚ್ಚು. ಶೇಕಡ ೭೦ರಷ್ಟು ವಿದ್ಯಾರ್ಥಿಗಳಾದರೂ ಈ ರೀತಿ ತೇರ್ಗಡೆಯಾಗುವರೆಂದು ಹೇಳಬಹುದು. ಪರೀಕ್ಷೆ ಹತ್ತಿರ ಬಂದಾಗ ಇಂಥವರ ಉಡುಪೇ ಬದಲಾಗುತ್ತದೆ. ಶರ್ಟು ಧೋತಿಗಳನ್ನುಟ್ಟು ಬರುತ್ತಾರೆ! ಪಂಚೆಯು ನಕಲು ಹೊಡೆಯಲು ಸಹಾಯಕವಂತೆ! ವಿದ್ಯೆಯಲ್ಲಿ ದಡ್ಡರಾದರೂ ನಕಲು ಹೊಡೆಯುವದರಲ್ಲಿ ನಿಪುಣರು ಈ ರೀತಿ ಪರೀಕ್ಷೆಯಲ್ಲಿ ಪಾಸಾಗುತ್ತಾರೆ. ನಕಲು ಹೊಡೆಯುವ ಸಾಧಾರಣ ಹುಷಾರಿರುವವರೂ ಸೋಲುತ್ತಾರೆ. ಆದ್ದರಿಂದ ಪರೀಕ್ಷೆಯು ಕೇವಲ ಒಂದು ಸೋಗಿನ ಅಳತೆ ವಿನಹ ಬೇರಿಲ್ಲ.

'ಗಿರಿಗಿಟಿ'

ಪ್ರಯೊಣಿಕರ ಕೇಳಿಕೆ

ಕೊಡಗಿನ ಅಂಕು ಡೊಂಕಾದ ರಸ್ತೆಯ ಬಸ್ ಪ್ರಯಾಣದಲ್ಲಿ ಸಾಮಾನ್ಯ ಸಾಹಸ ಜೀವಿಗಳಿಗೇ ದೇಹ ಹುಣ್ಣಾಗುತ್ತೆ. ಪೆಟ್ರೋಲ್ ವಾಹನೆಯಿಂದಾಗಿ ಹಲವರಿಗೆ ತಲೆ ತಿರುಗುತ್ತೆ. ಬೀಡಿ ಸಿಗರೇಟು ವಗೈರೆ ಸೇದಬಾರದು (Smoking Prohibited) ಎಂಬ ಆಜ್ಞೆ ಇತ್ತ ಅಧಿಕಾರಿ ವರ್ಗದ ಮುಂದೆಯೇ ಧೂಮಪಾನಿಗಳು ಸತ್ಯಾಗ್ರಹ ನಡೆಸಲೋ ಎಂಬಂತೆ ಹೊಗೆ ಬಿಡುತ್ತಿರುತ್ತಾರೆ. ಈ ಹೊಗೆ, ಪೆಟ್ರೋಲ್ ವಾಹನೆಗಳಿಂದಾಗಿ ತಲೆತಿರುಗಿ ಹೊಟ್ಟೆ ತೊಳಸುತ್ತೆ. ರಸ್ತೆಯ ಧೂಳು ಕಣ್ಣು ಮುಚ್ಚಿಸುತ್ತೆ. ಒಟ್ಟಿಗೆ ಜನನಿಬಿಡತೆಯಿಂದಾಗಿ ಶೆಖೆ, ಬೆವರು ಇವೆಲ್ಲಾ ಸೇರಿ ಪ್ರಜ್ಞೆಯರ್ಧವನ್ನೇ ತಪ್ಪಿಸುತ್ತೆ. ಆದರೆ ಇವೆಲ್ಲವನ್ನೂ ಕೊಡಗಿನ ವೀರ ಪೈತರು, ಈ ಪೈತರ ವೀರನಾರೀಮಣಿಗಳು ಸಹಿಸುತ್ತಾರೆ, ಸಹಿಸುತ್ತಿದ್ದಾರೆ. ಈಗ ಇವೆಲ್ಲಕ್ಕೂ ಕಲಶಪ್ರಾಯವಂತಿರುವ ಬಸ್‌ಗಳಲ್ಲಿನ 'ಹಿಮ್ಮುಖ ಸೀಟ್'. ಹಿಂದು ಕಡೆಗೆ ಮುಖಮಾಡಿ ಕೂರಲು ಹಿಂದೋ, ನುಗ್ಗಿದೋ 'ತೊಟ್ಟಿ'ಯಲ್ಲಿಯೋ, 'ಮಹಿಳೆಯರಿಗಾಗಿ'ಯೋ ಏರ್ಪಡಿಸಿದ ಜಾಗಗಳಾ! ಉದಾಸಿ. ಜಿ. ಎ. ಲಿಲಿಲ್ಲಿ ಮಹಿಳೆಯರ ಸೀಟು. ಈ ಮೇಲಿನ ವಾತಾವರಣ ಮಧ್ಯದಲ್ಲಿದ್ದು ಈ ಹಿಮ್ಮುಖ ಸೀಟಿನಲ್ಲಿ ಕುಳಿತು ನಾಂತಿ ಮಾಡದೆ, ಪ್ರಜ್ಞೆ ತಪ್ಪದೆ ಇರುವ ವ್ಯಕ್ತಿ ಕನ್ಯೂಡರನಿಗೆ ಜನ್ಮವಿತ್ತ ಕೊಡಗಿನ ವೀರರಮಣ, ರಮಣಿಯರೆಂದು ಪ್ರಶಂಸಿಸಿಕೊಳ್ಳಲು ಅರ್ಹನು! ದೃಢಕಾಯದವರೂ ಸಹ ಬಸ್ಸಿನದು ಕೆಲಸವಾಯ ಸುಧಾರಿಸಿಕೊಳ್ಳಬೇಕಾಗುತ್ತೆ. ಗರ್ಭಿಣಿಯರು ಖಾಯಿಲಸ್ಥರು, ವೃದ್ಧರು ಮತ್ತೆ ನೇರವಾಗಿ ಆಸ್ಪತ್ರೆಗೆ!

ಸುಖಕರವಲ್ಲದಿದ್ದರೂ, ಸುಗಮ ಪ್ರಯಾಣಕ್ಕೋಸ್ಕರ, ಬಸ್ ಮಾಲೀಕರು ಮತ್ತು ಸರಕಾರದವರೊಡನೆ ಪ್ರಯಾಣಿಕರ ಕೇಳಿಕೆಗಳಿವು. (೧) ಹಿಮ್ಮುಖ ಸೀಟು ತೆಗೆಯಿಸಿರಿ (೨) ಹೊಗೆಬತ್ತಿ ಸೇದ ಬಾರದು ನಿಯಮವನ್ನು ಅಕ್ಷರಃ ಪಾಲಿಸಿರಿ (೩) ಬಸ್ ವೇಗ; ಜನತುಂಬಿಸುವಿಕೆಗಳಲ್ಲಿ ಸರಕಾರಿ ನಿಯಮ ಸರಿಯಾಗಿ ಪರಿಪಾಲಿಸಿರಿ. ಈ ಕೇಳಿಕೆಗಳಿಗಾಗಿ ಮೊಲಿಕರು ಯಾ ಸರಕಾರ ಯಾವ ಹಣವ ಖರ್ಚು ಮಾಡುವ ಅವಶ್ಯವಿಲ್ಲ. ನಿಸ್ತೆರಿ ಪೈಸೆ; ಸೇತುವೆ; ಹೊಸ ಸರ್ವಿಸುಗಳಿಗ್ಹಾಗಿ, ಇವುಗಳ ಸುಧಾರಣೆಗೆ ಸರಕಾರಕ್ಕೆ ಹಣಬೇಕಾದೀತು. ಆದರೆ ಈ ಮೇಲಿನ ಕೇಳಿಕೆಗಳಿಗಾಗಿ ಹಣವೇ ಬೇಡ. ಖರ್ಚಿಲ್ಲದೆ ರೈತರ ಸಹಾನುಭೂತಿಯನ್ನು ಬಸ್ ಮಾಲಿಕರೂ ಹಾಗೂ ಸರಕಾರವೂ ಪಡೆದೀತೆಂದು ಆಶಿಸಬಹುದೆ?

'ಗೋರಜ'

ರಿಪಬ್ಲಿಕ್ ದಿನಾಚರಣೆ

ತಾ. ೧೭-೧-೫೦ ರ 'ಕೊಡಗು' ಪತ್ರಿಕೆಯಲ್ಲಿ ಕಾಕೋಟುಪರಂಬು ಶಾಲಾ ಉಸಾಧ್ಯಾಯರುಗಳ ವಿಷಯವಾಗಿ ಒಬ್ಬರು ಆಕ್ಷೇಪಣೆಯನ್ನು ಹೊರಿಸಿ ಪತ್ರ ಬರೆಸಿದ್ದು ನೋಡಿದೆನು. ಓದುಗರ ಓಲೆಗಳು ಎಂದರೆ ಪತ್ರಿಕೆಗಳ ಮೂಲೆಗಳು. ತಾ. ೨೫-೧-೫೦ನೇ ಬುಧವಾರ ಈ ಶಾಲೆಯು ಹೆಡ್ ಮಾಸ್ಟರವರು ವೀರಾಜಪೇಟೆಯಲ್ಲಿದ್ದರು ಎಂಬುದು ನಿಜವಲ್ಲ. ರಿಪಬ್ಲಿಕ್ ದಿನಾಚರಣೆಗಾಗಿ ಈ ಶಾಲೆಗೆ ಮಾತ್ರ ಹೆಣ ಕಳುಹಿಸದೆ ಅಕ್ಕಪಕ್ಕದ ಶಾಲೆಗಳಿಗೆ ಬಟವಾಡೆಗಾಗಿ ಈ ಶಾಲೆಯು ಹೆಡ್ ಮಾಸ್ಟರಿಗೆ ಹಣ ಕಳುಹಿಸಿದ್ದು ಶೋಚನೀಯ. ಆದರೂ ಈ ಶಾಲೆಯ ಹೆಡ್ ಮಾಸ್ಟರು ಪದ್ರಿ ಹಣವನ್ನು ಸಕಾಲಕ್ಕೆ ಎಲ್ಲಾ ಅಕ್ಕಪಕ್ಕದ ಶಾಲೆಗಳಿಗೂ ಬಟವಾಡೆ ಮಾಡಿದರು. ಈ ಶಾಲೆಗೆ ಎರಡು ದಿನ ರಜ ಬಿಡಬೇಕೆಂಬ ಹೆಕ್ಕುಂ ಮಾತ್ರ ಇತ್ತು. ಅದೇ ಮೇರೆ ತಾ. ೨೫ ರಂದು ರಜೆ ಬಿಟ್ಟರು. ರಜ ಬಿಟ್ಟು ಸಾಯಂಕಾಲ ಮನೆಗೆ ಹೋದ ಮೇಲೆ ಕಡಂಗಮುರೂರು ಪಟೇಲರು ೫೦ ರೂಪಾಯಿಗಳನ್ನು ತಂದು ಹೆಡ್ ಮಾಸ್ಟರವರಿಗೆ ಕೊಟ್ಟರು. ತಾ. ೨೬-೧-೫೦ ರಲ್ಲು ಹೆಡ್ ಮಾಸ್ಟರವರು ಈ ವಿಷಯ ಏನು ಮಾಡಬೇಕೆಂದು ತಿಳಿಯುವ ಉದ್ದಿಶ್ಯ ಶಾಲೆಗೆ ಬರುವಾಗ್ಗೆ ವೀರಾಜಪೇಟೆ ಪಾರ್ಪತ್ಯೆಗಾರರು ಮೋಟಾರ್ ಕಾರಿನಲ್ಲಿ ಖುದ್ದು ಬಂದು ಬಾಕಿ ೫೫ ರೂಪಾಯಿಗಳನ್ನು ಕೊಟ್ಟು ಈ ದಿನ ಸವೇ ರಿಪಬ್ಲಿಕ್ ದಿನಾಚರಣೆಯನ್ನು ನಡೆಯಬೇಕೆಂದು ಒತ್ತಾಯಪಡಿಸಿದರು. ಅದೇ ರೀತಿ ಬಹಳ ತೊಂದರೆ ತೆಗೆದುಕೊಂಡು ಶಾಲಾ ಮಕ್ಕಳಿಗೆ ತಿಳಿಸಲಾಯ್ತು. ಇಷ್ಟು ಹೊತ್ತಿಗೆ ಘಂಟೆ 12½ ಆಗಿತ್ತು. ಶಾಲಾ ಮಕ್ಕಳು ಮತ್ತು ಸಾರ್ವಜನಿಕರನ್ನು ಕರೆಸಿಕೊಂಡು ಈ ಊರಿನ ದೇವಸ್ಥಾನದಲ್ಲಿ ಪೂಜೆ ಮುಗಿಸಿ ನಂತರ ಆಟೋಟಗಳನ್ನು ಸಾಯಂಕಾಲ ಆರು ಘಂಟೆಯೊಳಗೆ ಮುಗಿಸಿದರು. ಈ ಅವ್ಯವಸ್ಥೆಗೆ ಉಸಾಧ್ಯಾಯರುಗಳು ಎಂದೂ ಕಾರಣರಲ್ಲ. ಆ ದಿವಸ ಅದಷ್ಟು ಪ್ರಯತ್ನಪಟ್ಟು ದಿನಾಚರಣೆಯನ್ನು ಮಾಡದೆ ಬಿಟ್ಟಿದ್ದರೆ ಇನ್ನು ಎಷ್ಟು ಆರೋಪಣೆ ಬರುತಿತ್ತೋ ದೇವರೇ ಬಲ್ಲ! ನಾರಾಯಣನನ್ನು ಒಲಿಸಬಹುದು ನರರನ್ನು ಒಲಿಸಲಾಗದು. ಅಧ್ಯಾಪಕರ ದಿನನಿತ್ಯದ ಕೆಲಸವು ಹ್ಯಾಗಿದೆಯೆಂಬುದಕ್ಕೆ ಕಳೆದ ವರ್ಷದ ಶಾಲೆಯ ಪರೀಕ್ಷಾ ಫಲಿತಾಂಶವೇ ಹೇಳುತ್ತಿರುವುದು ಎಂಬುದನ್ನು ಎಲ್ಲರೂ ತಿಳಿಯಬೇಕು. ಸ್ವತ್ಸ್ ಜನಾಬ್ದಾಂಕೆ ಹೆತ್ತು ಕೆಲಸ ಮಾಡುವುದು ಸುಲಭವೋ ಯಾ ಕೆಲಸ ಮಾಡಿದ್ದಕ್ಕೆ ಆಕ್ಷೇಪಣೆ ರುವುದು ಸುಲಭವೋ ಎಂದು ನೋಡಬೇಕ್ಕು.

ಹಾಜರಿದ್ದವ.

ಶಾಲಾ ಉತ್ಸವ.

ತಾರೀಕು ೧೧-೩-೫೦ ರ ಆಸರ ಹ್ನ ೨ ಗಂಟೆಗೆ ಹಾತೂರು ಮಾಧ್ಯಮಿಕ ಶಾಲೆಯಲ್ಲಿ ಆ ಶಾಲಾ ಸಮಿತಿಯ ವಾರ್ಷಿಕ ಮಹಾಸಭೆಯು ನಡೆಯಿತ್ತು. ಸಭೆಯಲ್ಲಿ ಎಲ್ಲಾ ವಿದ್ಯಾಧಿಕಾರಿಗಳವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಹಾತೂರು ಮತ್ತು ಇವರ ನೆರೆಯ ಐದು ಗ್ರಾಮಗಳ ಜನರು ಅಂದಾಜು ೩೦೦ಕ್ಕೆ ಮಿಕ್ಕಿ ಹಾಜರಿದ್ದರು. ಅಲ್ಲಿ ಚರ್ಚಿಸಿದ ಪ್ರಾಮುಖ್ಯ ವಿಷಯಗಳಾಗಿ ಹಾತೂರು ಮಾಧ್ಯಮಿಕ ಶಾಲೆಯನ್ನು ದ್ವಿತೀಯಸ್ಥಾಯಿ ಶಾಲೆಯನ್ನಾಗಿ ಪರಿವರ್ತಿಸುವ ವಿಷಯದಲ್ಲಿ ದ್ವಿತೀಯ ಸ್ಥಾಯಿ ಶಾಲೆಯು ಮೊದಲು ಸೋಪಾನವಾದ 4ನೇ ಫಾರವನ್ನು ಈ ವರ್ಷವೇ ತೆರೆಯುವಂತೆ ಸರ್ವಸಮ್ಮತದಿಂದ ಪಾಸಾಯಿತು. ಅಲ್ಲದೆ ಶಾಲಾ ಕಟ್ಟಡದ ನಿರ್ವಾಣ ಸಂಬಂಧ ೩೦,೦೦೦ ರೂಪಾಯಿ ಮಂಜೂರುಮಾಡಲು ಘನ ಸರ್ಕಾರವನ್ನು ಕೇಳಿಕೊಳ್ಳುವಂತೆ ಸರ್ವಸಮ್ಮತದಿಂದ ತೀರ್ಮಾನಿಸಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಕೇಂದ್ರವು ದ್ವಿತೀಯ ಸ್ಥಾಯಿ ಶಾಲೆಯಾಗಲು ಆರ್ಹತೆಯುಳ್ಳವುಗಳಲ್ಲಿ ಒಂದಾಗಿದೆ ಎಂದುದಲ್ಲದೆ ಈ ಕೇಂದ್ರ ಹಾಗೂ ಇದರ ಸನ್ನಿವೇಶವನ್ನು ವೀಚ್ಚಿ ವಾತಾವರಿ, ಶಾಲಾ ಆಡಳಿತ ಸಂಬಂಧ ಸೂಕ್ತ ಸಲಹೆಗಳನ್ನು ಕೊಟ್ಟರು. ಅಧ್ಯಕ್ಷರಿಗೆ ವಂದನೆಯನ್ನರ್ಪಿಸಿ ಸಭೆಯು ಮುಕ್ತಾಯಗೊಂಡಿತು.

ವೈ. ಕಾಂಗ್ರೆಸ್ ಅಧ್ಯಕ್ಷತೆ.

ವೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀಮತಿ ಯಶೋಧರಮ್ಮ ದಾಸಪ್ಪನವರನ್ನು ಅಖಿಲ ವೈಸೂರು ಕಾಂಗ್ರೆಸ್ ಕಮಿಟ್ಟಿಯವರು ಚುನಾಯಿಸಿರುವರು.

ಶ್ರೀಮತಿಯವರಿಗೆ ೬೮ ಓಟುಗಳೂ ಅವರನ್ನು ಪ್ರತಿಸಿದ್ದ ಶ್ರೀ ಎಸ್. ಜನ್ನಯ್ಯನವರಿಗೆ ೫೫ ಓಟುಗಳೂ ಬಂದವು. ಎರಡು ಓಟುಗಳು ವ್ಯರ್ಥವಾದವು.

ORANGE TREES FOR SALE.

10,000 good healthy orange trees up to 3 years age are available in the nurseries of Pollibetta Estate. These can be inspected at any time by prior arrangement. Price Rs. 15 a hundred.

ಕೃತಜ್ಞತಾವಂದನೆ.

ಫೆಬ್ರವರಿ ತಾರೀಕು ೬ರಲ್ಲಿ ಶಿವಾಧೀ
ರಾದ ನನ್ನ ಪತಿಯು ಆಕಾಲ ಮರಣ
ಂದ ನನಗುಂಟಾದ ಅಪಾರ ದುಃಖದ
ಲಕ್ಕೆ ಖುದ್ದಾಗಿ ಬಂದು ಮತ್ತು ತ
ಮ್ಮ ಸಂತಾಪನಾ ಸೂಚಕ ಪತ್ರಗಳ
ಮೂಲಕ ನನ್ನ ದುಃಖದಲ್ಲಿ ಭಾಗಿಗಳಾದ
ಂದು, ಇಷ್ಟ ಮಿತ್ರರಿಗೆ ಪ್ರತ್ಯೇಕ ವಂದ
ನಾರ್ಪಣೆಯನ್ನರ್ಪಿಸಲು ಅಶಕ್ತಳಾಗಿರು
ದರಿಂದ ಅವರೆಲ್ಲರಿಗೂ ನನ್ನ ಹೃತ್ಪೂರ್ವ
ಕೃತಜ್ಞತೆಯನ್ನು ಈ ಮೂಲಕ ಅರ್ಪಿ
ಸುತ್ತೇನೆ.

ಮಿಸೆಸ್. ಎಂ. ಡಿ. ಗಣಪತಿ.
ನೀಲಂಬೂರು.

ಬ ಹು ಮೂ ನ .

ನನ್ನ ಬಾಪ್ತು ಒಂದು ಒಳ್ಳೆ ಹಸ
ುರ್ಚಿ ತಾರೀಕು 7ನೇ ಮಂಗಳವಾರ
ನ ಕಾಣೆಯಾಗಿದೆ. ಕೆಂದ ವರ್ಣ, ಸು
ುರು 3 ಅಡಿ ಎತ್ತರ, ಬಲದ ಕೊಂಬು
ುರಿದು ಹೋಗಿದೆ. ಎಡದ ಕೊಂಬು
ುಮೂರು ಮುಕ್ಕಾಲು ಅಡಿ ಉದ್ದವಾಗಿ
ುಳ್ಳ ಎಡಕ್ಕೆ ಬಾಗಿದೆ. ಅದನ್ನು ಪತ್ತೆ
ಹಚ್ಚಿ ಈ ಕೆಳಗಿನ ವಿಳಾಸಕ್ಕೆ ತಿಳಿಸಿದಲ್ಲಿ
ರೂ. 5/- ಬಹುಮೂನ ಕೊಡಲಾಗು
ುವುದು.

ಪುಟ್ಟಚಂಡ ಬಿ. ಮೇದಪ್ಪ,
ಬೆಳ್ಳಿರಮಾಡು, ವೀರಾಜಪೇಟೆ.

ಡಾ. ಎಂ. ಎಂ. ಚಂಗಪ್ಪ

ಎಂ. ಬಿ., ಬಿ. ಎಸ್.

ಇವರು ತಮ್ಮ ವೈದ್ಯಕೀಯ
ಸಲಹಾ ಕೇಂದ್ರ ಮತ್ತು
ಔಷಧಾಲಯವನ್ನು
ವೀರಾಜಪೇಟೆಯಲ್ಲಿ
3-1 ತೆರೆದಿರುವರು.

ಬೇ ಕಾ ಗಿ ವೆ.

ಜಂಗಲ್ ಕಾಕ್ ನೆಕ್ಸ್

ದೊಡ್ಡ ನೆಕ್ಕುಗಳು—ಸೈಜು ಸುಮಾ
ರು 6 ಇಂಚು × 4 ಇಂಚಿನವುಗಳಿಗೆ
ಪ್ರತಿಯೊಂದರ ರೂ. ೧/-ರಂತೆ ಕ್ರಯ
ಕೊಡಲಾಗುವದು. ಚಿಕ್ಕವಕ್ಕೆ ದಾಮು
ಶಾಯಿ ಮೇರೆ ಬೆಲೆ ಕೊಡಲಾಗುವದು.
ಇವುಗಳನ್ನು ರಿಜಿಸ್ಟರ್ಡ್ ಪಾರ್ಸೆಲುಗಳ
ಮೂಲಕ ಈ ಕೆಳಗಿನ ಅಡ್ರೆಸ್ಸಿಗೆ ಕಳುಹಿಸಿ
ರಿ. ಅವುಗಳ ಬೆಲೆಯನ್ನು ಮನಿಯಾರ್ಡರ
ರು ಮೂಲಕ ಮರು ಟಪಾಲನಲ್ಲಿ ನಿಮಗೆ
ದೊರೆಯುವದು.

D. H. Thangam & Co.,
82. Thambu Chetty Street,
4-3 *G. T. Madras.*

ಪ್ರ ಕ ಟ ಣೆ .

ಕೊಡಗು ಮುಜ್ರಾಯಿ ಇಲಾಖೆಗೆ
ಸೇರಿದ ಮಡಿಕೇರಿಯ ಪಾಡಿನಾಲ್ಕ್ನಾಡು
ತಾಲೋಕುಗಳ ಪರ ಮೆಂಬರುಗಳಾ
ಗಿದ್ದ ರಾವುಬಹದ್ದೂರ್ ಪಿ. ಎ. ಚಂಗಪ್ಪ
ನವರ ಮತ್ತು ಶ್ರೀ ಎಂ. ರಘುನಾಥರೈಯ
ವರ ಮತ್ತು ಎಡೆನಾಲ್ಕ್ನಾಡು ಕಿಗ್ಗಟ್ಟು
ನಾಡು ತಾಲೋಕುಗಳ ಪರ ಮೆಂಬರಾಗಿ
ದ್ದ ಶ್ರೀ ಬಿ. ಐ. ಕರುಂಬಯ್ಯನವರ
ಮೆಂಬರುತನದ ಅವಧಿಯು ಪೂರೈಸಿದರಿಂ
ದ ಸದರಿ ತಾಲೇಕುಗಳ ಪರ ಮೆಂಬರಾಗ
ಲು ಖಾಯಿಸದಾರರು ಆ ಬಗ್ಗೆ
ಇಲಾಖಾ ಪ್ರೆಸಿಡೆಂಟರವರ ಹೆಸರಿಗೆ ತಾ
ರೀಕು 1-4-50ರ ವಳಗೆ ಅರ್ಜಿ ಬರೆದು
ಕೊಳ್ಳತಕ್ಕದ್ದು. ವಾಯಿದೆ ದಾಟಿ ಬಂ
ದ ಅರ್ಜಿಯನ್ನು ಅಂಗೀಕರಿಸುವದಿಲ್ಲ.

ಮಡಿಕೇರಿ ಪಾಡಿನಾಲ್ಕ್ನಾಡು ತಾಲೋಕುಗಳ ಪರ ಅರ್ಜಿ ಮೇರೆ ತಾರೀಕು 7-4-50ರಲ್ಲು ಮಡಿಕೇರಿ ದೇವಸ್ಥಾನದ ಹಾಲಿನಲ್ಲು ಮಧ್ಯಾಹ್ನ 12 ಗಂಟೆಯಿಂದ 5 ಗಂಟೆ ವರೆಗೆ ಮತ್ತು ವೀರಾಜಪೇಟೆ ಗಣಪತಿ ದೇವಸ್ಥಾನದ ಬಳಿ ಎಡೆನಾಲ್ಕ್ನಾಡು ಕಿಗ್ಗಟ್ಟುನಾಡುಗಳ ಪರ ಅರ್ಜಿ ಮೇರೆ ತಾ. 12-4-50ರಲ್ಲು ಮಧ್ಯಾಹ್ನ 12 ಗಂಟೆಯಿಂದ 5 ಗಂಟೆಯ ವರೆಗೆ ಚುನಾವಣೆ ಬಗ್ಗೆ ಓಟ್ಸ್ ರಿಕಾರ್ಡು ಮಾಡಲಾಗುತ್ತೆ. ಓಟರುಗಳ ಪಟ್ಟಿಯೆಲ್ಲಿ ಹೆಸರು ದಾಕ್ಲು ಮಾಡಿಸಿಕೊಂಡವರೆಲ್ಲರೂ ಓಟ್ ಕೊಡಬಹುದು.

ಮಡಿಕೇರಿ, ಸಿ. ಬಿ. ಮುದ್ದಪ್ಪ,
16-3-50. ಪ್ರೆಸಿಡೆಂಟ್.

ಬಟ್ಟೆ ಬೇಕೆ?

ಮದುವೆ ಸಮಾರಂಭಗಳಿಗೆ ಬೇಕಾದ ನಾನಾ ರೀತಿಯ ಬೆಂಗಾಲ್ ಬೆನಾರಿಸ್ ಸಿಲ್ಕುಗಳು, ಸೇಲಂ, ಮಧುರಾ ಜವುಳಿಗಳು, ಉತ್ತಮ ಉಲನ್ ಬಟ್ಟೆಗಳು ಕಳೆದ ವರ್ಷದ ಬೆಲೆಗಿಂಥಾ ಶೇಕಡ ೫೦% ರಷ್ಟು ಕಡಿಮೆ ದರದಲ್ಲಿ ದೊರೆಯುವವು.

ಅತ್ಯುತ್ತಮ ಮೂದರಿಯ ಬೆನಾರಿಸ್ ಮತ್ತು ಕಾಶ್ಮೀರ್ ದಟ್ಟಿಗಳು ಸದಾ ದೊರೆಯುವವು.

ನಾನೂರು ರೂಪಾಯಿಗಳಿಗೆ ಮೇಲ್ಪಟ್ಟ ಬಟ್ಟೆ ತೆಗೆಯುವವರು ಈ ಪತ್ರಕ್ಕೆ ತಿಳಿಸಿದಲ್ಲಿ ಅವರವರ ಮನೆ ಬಾಗಿಲಿಗೆ ತಂದು ಸರಬರಾಯಿ ಮಾಡಲಾಗುವದು.

ಒಮ್ಮೆ ಬಂದು ಪರೀಕ್ಷಿಸಿರಿ.

ವಲ್ಲಿ ಮೊಹಿದಿನ್ ಸಾಹೇಬ್ & ಬ್ರದರ್,
ಸಿಲ್ಕ್ ಮತ್ತು ಕಾಟನ್ ವ್ಯಾಪಾರಿಗಳು,
12-9 ವೀರಾಜಪೇಟೆ (ಕೊಡಗು)

ಗ ಮ ನಿ ಸಿ ರಿ!

ದಿನವಹಿ ಹೆಚ್ಚುತ್ತಿರುವ ಗ್ರಾಹಕರ ಬೇಡಿಕೆಯನ್ನು ಸಲ್ಲಿಸಲು ನಮ್ಮ ಅಂಗಡಿಯನ್ನು ವಿಸ್ತರಿಸಿರುವದಲ್ಲದೆ ಅತ್ಯುತ್ತಮ ಸಿಲ್ಕ್, ಉಲನ್ ಮತ್ತು ಮಿಲ್ ಬಟ್ಟೆಗಳ ಯಥೇಚ್ಛ ಸ್ಟಾಕ್ ಇಡಲಾಗಿದೆ. ಯಾವ ನಮೂನೆಯ ಬಟ್ಟೆಗೂ ಆದರ್ಶವೆನಿಸಿದೆ. ಆರ್ಡರ್ ಪ್ರಕಾರ ಅತೀ ಆಧುನಿಕ ರೀತಿಯಲ್ಲಿ ಉಡುಪುಗಳನ್ನು ಹೊಲಿದು ತಯಾರಿಸಿ ಕೊಡಲಾಗುವದು.

ಬಟ್ಟೆಯ ವಿಚಾರದಲ್ಲಿ ಏನು ಬೇಕು! ಪಟ್ಟೂ ಬ್ರದರ್ಸ್ ವೆತ್ತಿದ ಕೈ

ಪಟ್ಟೂ ಬ್ರದರ್ಸ್,
ಲಕ್ಷ್ಮೀ ಬಿಲ್ಡಿಂಗ್ಸ್,
62-10 ಟೌನ್‌ಹಾಲಿನ ಎದುರು, ಮೈಸೂರು.

ದಿ ಕೂರ್ಗ್ ಜನರಲ್ ಇಂಡಸ್ಟ್ರೀಸ್ ಲಿಮಿಟೆಡ್,
ಫ್ಲೇ ಜ ರ್ ಪೇ ಟೆ.
ಬೇಕಾಗಿದ್ದಾರೆ.

ಕೊಡಗಿನ ಪ್ರತಿ ಗ್ರಾಮ ಮತ್ತು ಪಟ್ಟಣಗಳಲ್ಲಿ ಬಿದ್ದು ಮಣ್ಣುಪಾಲಾಗಿ ಹೋಗುತ್ತಿರುವ ಮೂಳೆಗಳನ್ನು ಶೇಖರಿಸಿಕೊಡಲು ಪ್ರತಿ ಹಳ್ಳಿ ಮತ್ತು ಪಟ್ಟಣಗಳಲ್ಲಿ ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ.

ನೇಮಕವಾದ ಏಜೆಂಟರುಗಳು ಕಂಪೆನಿಯಿಂದ ಗೊತ್ತಾದ ಸ್ಥಳಕ್ಕೆ ಮೂಳೆಗಳನ್ನು ಸಾಗಿಸಿ ಕೊಟ್ಟಲ್ಲು ಮಣ ಒಂದರ ರೂ. 0-12-0 ಯಂತೆ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಫ್ಲೇಜರ್‌ಪೇಟೆ,
ತಾ. 30-9-49

ಕೆ. ಕೆ. ತಿಮ್ಮಯ್ಯ,
ಮ್ಯಾನೇಜಿಂಗ್ ಡೈರೆಕ್ಟರ್.

THE WARDEN INSURANCE CO., Ltd.

Head Office: Bombay.

LIFE, FIRE, ACCIDENT, MOTOR & W. C. INSURANCES.

Managing Director; – **S. H. THAKER.**

Business in force	Rs. 5,00,00,000
Assets	,, 1,00,00,000
Income	,, 35,00,000

Also **LOCAL MANAGERS OF**

THE LONDON GUARANTEE & ACCIDENT CO., Ltd.
(Incorporated in England)

Assets Exceed Rs. 10,00,00,000

a Subsidiary Company of

THE PHOENIX ASSURANCE CO., Ltd.
(One of the Largest Assurance Companies in the World)

Assets Exceed Rs. 45,00,00,000

Transact **FIRE INSURANCE**

Enquiries for representation solicited.
Apply to;

Chief Agency Office *or* **A. S. Aiyappa,**
Virajpet (Coorg) *Branch Secretary,*
Gandhinagar,
BANGALORE CITY

The Popular Insurance Company Ltd.

Established over 20 years ago, the Company is noted for its sound progress, careful management and efficient service to its constituents.

Agents on permanent and remunerative contracts are wanted in COORG. Apply today:

Head Office:
MANGALORE.
26-1

K. M. Bopaiah, Esq.,
Branch Secretary for
Mysore & Coorg,
85 Sultanpet, BANGALORE 2.

ಸಾರಾಯಿ ಕೂಪನುಗಳನ್ನು ಪಡೆದ

ಮುಸ್ಲಿಂ ಬಾಂಧವರಲ್ಲಿ ವಿನಂತಿ

ಇಸ್ಲಾಂ ಧರ್ಮದ ಪ್ರಕಾರ ನಿಶಾ ಸೇವನೆ ಮಾಡಬಹುದೇ? ನಿಶಾ ಸೇವನೆಯು ತನ್ನ ಧರ್ಮಕ್ಕೆ ವಿರೋಧವಾಗಿದ್ದಲ್ಲಿ, ಧರ್ಮವನ್ನುಲ್ಲಂಘಿಸಿ ನಿಶಾ ಸೇವನೆ ಮಾಡುವ ಇಸ್ಲಾಂ ಅನುಯಾಯಿಗಳು ಜಾತಿಭ್ರಷ್ಟರಾಗಿರುವುದಿಲ್ಲವೇ? ವ್ಯಕ್ತಿ ಸ್ವಾತಂತ್ರ್ಯಕ್ಕಿಂತ ಸಾಮೂಹಿಕ ಸ್ವಾತಂತ್ರ್ಯವನ್ನು ಪ್ರೀತಿಸುವ ತನ್ನ ಜನಾಂಗವು ಯಾವ ಪ್ರತೀಕಾರವೂ ಇಲ್ಲದೆ ಇಂಥಾ ನಿಶಾಸೇವನೆಯನ್ನು ಸಮೂಹದಲ್ಲಿರಿಸಿಕೊಂಡಿರುವುದು ಸಾಧ್ಯವೇ? ಸ್ವಭಾವತಃ ಕುಡುಕರಾಗಿರುವವರನ್ನು ಕುಡುಕತನದಿಂದ ತಪ್ಪಿಸಲು ಯಾವ ಜನಾಂಗಕ್ಕೂ ಸಾಧ್ಯವಾಗದ ವೇಳೆ, ಅಂಥವರಿಗೆ ಪೂರ್ತಿ ಪಾನನಿರೋಧ ಶಾಸನವು ಜಾರಿಗೆ ಬರುವ ವರೆಗೆ ಒಂದು ರೀತಿಯ ರಿಯಾಯಿತಿಯನ್ನು ತೋರಿಸಬಹುದೆಂದು ಅನ್ನೋಣ. ಆದರೆ ಕುಡುಕರಲ್ಲದವರು ಕುಡುಕರ ಪ್ರೇರಣೆಯಿಂದ ಕುಡುಕತನವನ್ನು ಅಭ್ಯಾಸ ಮಾಡಲು ಹೊರಟರೆ ಆಥವಾ ಕುಡುಕರ ಇಚ್ಛೆಯಂತೆ ಅವರಿಗೆ ಸಹಾಯಕರಾಗಲು ಇಳಿದರೆ ಅಂತಹವರನ್ನು ಅಡ್ಡ ದಾರಿಗೆ ಇಳಿಯುವ ರೀತಿಯಲ್ಲಿ ತಡೆಯಲು ಸಾಧ್ಯವಿಲ್ಲವೇ? ಜನಾಂಗದ ಹಾಗೂ ದೇಶದ ಏಳಿಗೆಗಾಗಿ ಸ್ವಲ್ಪವೂ ವಿಳಂಬ ಮಾಡದೆ ಜಾಗ್ರತೆಯಾಗಿ ವಿಚಾರಿಸಿ ತಕ್ಕ ಕ್ರಮವನ್ನು ನಿಮ್ಮ ಧರ್ಮದ ಹೆಸರಿನಲ್ಲಿ ಕೈಗೊಳ್ಳಿರೆಂದು ನನ್ನ ಪ್ರಾರ್ಥನೆ. ಸದುದ್ದೇಶದ ನಿಮ್ಮ ಪ್ರಯತ್ನಕ್ಕೆ ಸರ್ವರ ಬೆಂಬಲವೂ ಮಾತ್ರವಲ್ಲದೆ ಸರಕಾರದ ಸಹಾಯವೂ ಇರುವುದೆಂಬುದರಲ್ಲಿ ಅನುಮಾನವಿಲ್ಲ.

ಕಳೆದ ವರ್ಷದಿಂದ ಕೊಡಗಿನಲ್ಲಿ ಸಾರಾಯಿ ನಿಯಂತ್ರಣ ಪದ್ಧತಿಯು ಜಾರಿಗೆ ಬಂದಿರುವ ವಿಷಯ ಎಲ್ಲರಿಗೂ ತಿಳಿದೇ ಇರುತ್ತೆ. ಈ ಪದ್ಧತಿಯಿಂದ ಬಡವರು ಧನಿಕರಿನ್ನೆದೆ ಎಲ್ಲರಿಗೂ ಆಗೋಚರವಾದ ಅದೆಷ್ಟೋ ಪ್ರಯೋಜನಗಳಾಗಿರುತ್ತವೆಂಬುದರಲ್ಲಿ ಸಂಶಯವಿಲ್ಲ. ಬಡವರ ಆರ್ಥಿಕ ಸ್ಥಿತಿಯು ಸ್ವಲ್ಪಮಟ್ಟಿಗಾದರೂ ಸುಧಾರಿತವಾಗಿದೆ ಎಂಬುದರಲ್ಲಿ ಯಾವ ಚರ್ಚಾಸ್ಪದ ಸಂಗತಿಗಳೂ ಇರಲಾರವು. ವೇಳಾಗಿ ಪೋಲೀಸು ಇಲಾಖೆಗೆ ಎಷ್ಟೋ ವ್ಯಾಜ್ಯಗಳು ಕಡಿಮೆಯಾಗಿವೆ. ಕೇವಲ ಹಿಂದುಳಿದ ಹರಿಜನರು ಇದರ ಫಲವನ್ನು ಯಶಸ್ವಿಯಾಗಿ ಅನುಭವಿಸುತ್ತಲಿರುವರು. ಅಂಕೆ ಸಂಖ್ಯೆಗಳಿಂದ ಉದಾಹರಿಸುವುದಾದರೆ, ಮಡಿಕೇರಿಯ ಒಂದು ಸಾರಾಯಿ ಡಿಪೋವನ್ನು ಗಣನೆಗೆ ತೆಗೆದುಕೊಳ್ಳೋಣ. ಈ ಡಿಪೋವಿನಲ್ಲಿ ಕಳೆದ ವರ್ಷದಲ್ಲಿ ಇನ್ನ ಅಂದಾಜು ೨೨೦೦ ಸಾರಾಯಿ ಪರ್ಮಿಟ್ಟುದಾರರ ಪೈಕಿ ಹೆಚ್ಚೆಂದರೆ ೩೦ ಹರಿಜನ ಪರ್ಮಿಟ್ಟುದಾರರಿದ್ದಿರಬಹುದು. ಮತ್ತು ೨೦ ಕ್ಕಿಂತ ಹೆಚ್ಚಾಗಿ ಮುಸ್ಲಿಂ ಪರ್ಮಿಟ್ಟುದಾರರುಗಳಿರಲಿಲ್ಲ. ಈ ವರ್ಷದ ಮುಸ್ಲಿಂ ಪರ್ಮಿಟ್ಟುದಾರರ ಸಂಖ್ಯೆಯೇ ಈ ಲೇಖನದ ಮೂಲವಾಗಿದೆ.

ಮಡಿಕೇರಿ ಸಾರಾಯಿ ಡಿಪೋವಿನಿಂದ ಸಾರಾಯಿಯನ್ನು ರೇಶನ್ ಮೇರೆ ಹೊಂದಲು ಈ ವರೆಗೆ ಬಂದಿರುವ ಅಂದಾಜು ೭೦೦ ಅರ್ಜಿಗಳಲ್ಲಿ ಸಾಧಾರಣವಾಗಿ ೩೦೦ ಅರ್ಜಿಗಳು ಮುಸ್ಲಿಂ ಬಾಂಧವರಿಂದಲೇ ಬಂದಿದೆಯೂಗಿ ವದಂತಿಯಿದೆ. ಇದೆಂತಹ ನಾಚಿಕೆಗೇಡು! ಕುಡುಕ ಜನಾಂಗವು ಕುಡಿಯುವುದನ್ನು ಬಿಡುತ್ತಿರುವಲ್ಲಾ, ಕುಡುಕರಲ್ಲದವರು ಕುಡಿಯಲು ಪ್ರಾರಂಭಿಸಿರುವರಲ್ಲವೇ? ಇಡೀ ಮುಸ್ಲಿಂ ಜನಾಂಗಕ್ಕೇ ಇದರಿಂದ ಒಂದು ಅಪಕೀರ್ತಿಯಲ್ಲವೇ? ಈಗ ಅರ್ಜಿ ಬರಕೊಂಡಿರುವವರೆಲ್ಲರೂ ಸಾರಾಯಿಯನ್ನು ಕುಡಿಯುವವರೇ? ಹಾಗಿದ್ದಲ್ಲ. ಇಷ್ಟೊಂದು ಜನರು ಗತಿಸಿದ ವರ್ಷದಲ್ಲಾ ಎಲ್ಲಿದ್ದರು? ಇಲ್ಲಿಯೇ ಇದ್ದಲ್ಲಾ ಏತಕ್ಕಾಗಿ ಪರ್ಮಿಟ್ಟುಗಳನ್ನು ಹೊಂದಿಕೊಂಡಿರಲಿಲ್ಲ? ಈಗ ಏತಕ್ಕಾಗಿ ಪರ್ಮಿಟುಗಳನ್ನು ಹೊಂದಲು ಅಪೇಕ್ಷಿಸಿರುವರು? ಎಂಬಿವೇ ಮೊದಲಾದ ಪ್ರಶ್ನೆಗಳು ಪ್ರತಿಯೊಬ್ಬನಲ್ಲೂ ಉದ್ಭವಿಸುವುದು ಸಮಂಜಸವಾಗಿಯೇ ಇದೆ. ಈ ರೀತಿಯಿಂದ ಬಿಡುಸಾಗಿ ಇನ್ನೂ ಬರುತ್ತಿರುವ ಮುಸ್ಲಿಮರ ಸಾರಾಯಿ ಅರ್ಜಿಗಳಿಗೆ ಕಾರಣವೇನಿರಬಹುದು? ಇದಕ್ಕೆ ಕಾರಣವಿಲ್ಲದಿಲ್ಲ. ಬೇಕಷ್ಟು ಕಾರಣಗಳಿರಬಹುದು. ಈಗ ತಿಳಿದಿರುವ ಒಂದೇ ಒಂದು ಸುಲಭ ಕಾರಣವೆಂದರೆ ಕಳ್ಳಸಂತೆಯು ಆಶೆ ಎನ್ನಬಹುದು.

ಸಾಧಾರಣವಾಗಿ ಈಗಿರುವ ವದಂತಿ ಮೇರೆ, ಎರಡು ಮೂರು ಜನ ಈ ವ್ಯಾಪಾರದಲ್ಲಿ ನುರಿತ ಮುಸ್ಲಿಮರು ಮೇಲಿನ ಎಲ್ಲಾ ಅರ್ಜಿಗಳಿಗೂ ಕಾರಣರು ಎಂದು ತಿಳಿದುಬರುತ್ತದೆ. ಈ ವ್ಯಾಪಾರಕ್ಕಾಗಿ ಯಾವ ಗೋಪ್ಯತೆಯೂ ಇಲ್ಲದೆ ಏನನ್ನೂ ಅರಿಯದ ಅನೇಕರಿಂದ ಅರ್ಜಿಗಳನ್ನು ಬರೆಸಿ, ಪ್ರತಿ ಅರ್ಜಿಗೂ ಕೊಡಬೇಕಾದ ರುಸುಮನ್ನೂ ಸಹ ಇವರೇ ಕೊಟ್ಟಿರುವುದಾಗಿದೆಯಂತೆ! ಈ ವಿಚಾರವು ಈಗಾಗಲೇ ಪೂರ್ತಿಯಾಗಿ ತಿಳಿದಿಲ್ಲವಾದರೂ ನಾಳೆಯೊದರೂ ಸರಕಾರದವರ ತಿಳುವಳಿಕೆಗೆ ಬಾರದಿರುವುದಿಲ್ಲ. ಸ್ವಪ್ರಯೋಜನಕ್ಕಾಗಿ ಏನೂ ತಿಳಿಯದವರನ್ನು ಬಲಿಕೊಡುವ ಇಂಥಾ ಧೂರ್ತತನವು ಖಂಡನೀಯವಾಗಿದೆ ಅಂಥವರನ್ನು ಬಾಯಿಗೆಳೆಯಲು ಮತಾಭಿಮಾನಿಗಳೂ, ದೇಶಾಭಿಮಾನಿಗಳೂ ಆದ ನಾವು ಮುಂದೆ ಬರಬೇಕಾಗಿದೆ. ಪಾನನಿರೋಧವನ್ನು ಜಾರಿಗೆ ತರಲಿರುವ ನಮ್ಮ ಸರಕಾರವು ಈ ದುಶ್ಚಟವನ್ನು ಬಿಡಿಸಲು ಮತ್ತು ನಿಮ್ಮ ಧರ್ಮವನ್ನು ರಕ್ಷಿಸಲು ಸೆರವಾಗದಿರದು.

ತಮ್ಮ ಖಾಜಿ ಖಾಜೇಬರುಗಳಾಗಲೀ, ಮುಕ್ರಿಗಳಾಗಲೀ ಯಾ ಇತರ ಮುಂದಾಳುಗಳಾಗಲೀ ನಿಮ್ಮವರ ಸಾರಾಯಿ ಅರ್ಜಿಗಳಿಗೂಢಾರ್ಥವನ್ನರಿತು ತೀಕ್ಷ್ಣವಾಗಿ ಪರಿಶೀಲನೆಯನ್ನು ನಡೆಸುವಂತಾಗಿ ನಂಬಿಕೆ ಇದೆ. ಅನಾವಶ್ಯವಾಗಿ ಅಂದರೆ ಬೇರೆ ಸ್ವಾರ್ಥಪರರ ಉಪಯೋಗಕ್ಕಾಗಿ ಅಥವಾ ಕಳ್ಳಸಂತೆಯಲ್ಲಿ ಮಾರಾಟಮಾಡಲು ಸಾರಾಯಿಗೆ ಅರ್ಜಿಗಳನ್ನು ಬರಕೊಂಡವರು ಈಗಲಾದರೂ ಪಶ್ಚಾತ್ತಾಪಪಟ್ಟು ಮುಂದೆ ಬಂದು ತಮ್ಮ ತಮ್ಮ ಅರ್ಜಿಗಳ ಮೇರೆ ದೊರೆಯುತ್ತಿರುವ ಪರ್ಮಿಟುಗಳನ್ನು ವಜಾ ಮಾಡಿಸಿಕೊಂಡಲ್ಲು ಅವರ ಸದ್ವರ್ತನೆಗಾಗಿ ಜನತೆಯು ಅವರನ್ನು ಕೊಂಡಾಡುವುದು, ಸರಕಾರವು ಕ್ಷಮಿಸುವುದು.

ಮಡಿಕೇರಿಯಲ್ಲಿ ಸಾಧಾರಣವಾಗಿ ಎಷ್ಟು ಜನ ಪ್ರಾಯ-ಪ್ರಬುದ್ಧ ಮುಸ್ಲಿಮರಿರಬಹುದು? ಇವರೆಲ್ಲರೂ ಸಾರಾಯಿಯನ್ನು ಕುಡಿಯುವವರೇ ಆಗಿರುವರೇ? ಖಂಡಿತವಾಗಿಯೂ ಇಲ್ಲ. ಹಾಗೆಂದ ಮೇಲೆ ಮುನ್ನೂರು ಜನಗಳವರೆಗೆ ಸಾರಾಯಿ ಪರ್ಮಿಟ್ಟುಗಳಿಗೆ ಅರ್ಜಿಗಳನ್ನು ಬರಕೊಂಡವರು ಮುಂದ್ಯಾರಿರಬಹುದೆಂಬುದನ್ನು ತಾವು ತಮ್ಮ ದೇವಾಲಯಗಳಲ್ಲೂ ಯಾ ಬೇರೆಲ್ಲಿಯಾದರೂ ಜನಾಂಗದವರದೊಂದು ಸಭೆ ಸೇರಿಸಿ ವಿಚಾರಿಸಿ ತಕ್ಕ ಕ್ರಮವನ್ನು ಕೈಗೊಂಡು ಈ ನಿಶಾಸೇವನೆಯಿಂದಾಗುತ್ತಿರುವ ಅನಾಹುತ ಮತ್ತು ಅಶ್ಲೀಲತೆಗಳನ್ನು ಅವರಿಗೆ ಬೋಧಿಸಿ ತಿಳಿಸಿ, ಧರ್ಮದ ಹಾಗೂ ದೇಶದ ಅಭಿವೃದ್ಧಿಗಾಗಿ ಈ ದುರ್ವ್ಯಾಪಾರವನ್ನು ತಡೆಯಬೇಕಾಗಿದೆ. ಕೆಲವು ಜನ ಸ್ವಾರ್ಥಪರ ದ್ರೋಹಿಗಳಿಂದ ಇಡೀ ಜನಾಂಗಕ್ಕೇ ಅಪಕೀರ್ತಿ ಬರುವಂತಾಗಿದೆ. ಇದು ಮುಸ್ಲಿಂ ಬಾಂಧವರ ಪ್ರಾಮಾಣಿಕತೆಯ ಪರಿತೋಧನಾ ಕಾರ್ಯವೆಂದು ಭಾವಿಸಿ ಒಡನೆ ತಕ್ಕ ಕ್ರಮ ಕೈಗೊಳ್ಳಿರೆಂದು ವಿನಂತಿ. ಮುಸ್ಲಿಂ ಬಂಧು.

ಪಾಕಿಸ್ತಾನ ಸೇನೆಗಳು ಅಸ್ಸಾಮ್ ಗಡಿಯಲ್ಲಿ.

'ಶಿಲ್ಲಾಂಗಿಗೆ ತಲಪಿದ ವಾರ್ತೆಯಂತೆ, ಪಾಕಿಸ್ತಾನದ ಸೇನೆಗಳು, ಕಚಾರ್ ತ್ರಿಪುರಾ ಮತ್ತು ಗೋಲಪಾರಾ-ಕೂಚ್ ಬಿಹಾರ ಗಡಿಯಲ್ಲಿ ಕೇಂದ್ರೀಕರಿಸಲ್ಪಡುತ್ತಿವೆ'-ಹೀಗೆಂಬುದಾಗಿ, ಡಿಲ್ಲಿಯ 'ಹಿಂದೂಸ್ಥಾನ ಸ್ಟ್ಯಾಂಡಾರ್ಡ್' ಪತ್ರಿಕಾ ಬಾತ್ಮಿದಾರರು ವರದಿ ಮಾಡಿರುವರು. ಆ ಸೇನೆಗಳ ಅಭ್ಯಾಸವೂ ನಡೆದಿದೆ. ಹಿಂದೂಗಳಿಂದ ಸುಮಾರು ೨೫೦ ಲಾರಿ ಟಾರು ಬಟ್ಟೆಗಳು, ಟ್ರಕ್‌ಗಳು ಮತ್ತು ಖಾಸಗಿ ಕಾರುಗಳನ್ನು ಪೂರ್ವ ಪಾಕಿಸ್ತಾನ್ ಸರಕಾರದವರು ಮುಟ್ಟುಗೋಲು ಹಾಕಿ ಪಾಕಿಸ್ತಾನ ಸೈನ್ಯಾಧಿಕಾರಿಗಳಿಗೊಪ್ಪಿಸಿರುವರಂತೆ. ಹಿಂದೂಗಳ ಸೈಕಲುಗಳ ಮತ್ತು ದೋಣಿಗಳ ಖಾನೇಶುಮಾರಿ ಮಾಡಿರುವರು; ಹಿಂದೂಗಳ ಸುಮಾರು ೬೦೦೦ ಮನೆಗಳನ್ನು 'ರಿಕ್ವಿಜಿಶನ್' ಮಾಡಲಾಗಿದೆ.

ಜಯಪ್ರಕಾಶರನ್ನು ಪಂಡಿತ ನೆಹರುರವರು ಕರೆಸಿರುವರು.

ನಾಗಪುರದಲ್ಲಿದ್ದ, ಸೋಶಲಿಸ್ಟ್ ಮುಂಡ ಶ್ರೀ. ಜಯಪ್ರಕಾಶ ನಾರಾಯಣರನ್ನು, ಪ್ರಧಾನ ಸಚಿವರು, ಕಲ್ಕತ್ತಕ್ಕೆ, ಪೂರ್ವ ಬಂಗಾಲಕ್ಕೆ ಸಂಬಂಧಿಸಿದ ಪ್ರಮುಖ ಸಮಸ್ಯೋಜನೆಗೆ, ಅವಸರದಲ್ಲಿ, ಕರೆಸಿರುವರು. (ನಾಗಪುರ ಪತ್ರಿಕಾ ವ್ಯವಸಾಯಿಗಳ ಸಂಘದಲ್ಲಿ ಭಾಷಣ ಮಾಡುವಾಗ ಶ್ರೀ. ಜಯಪ್ರಕಾಶಕರು, 'ಯಾವ ಯತ್ನವೂ ಫಲಕಾರಿಯಾಗದಿದ್ದರೆ ಭಾರತ ಸೇನೆಗಳನ್ನು ಪಾಕಿಸ್ತಾನದೊಳಗೆ ಕಳಿಸಿಯಾದರೂ ರಕ್ಷಣೆಮಾಡಬೇಕು. ದೇಶಕ್ಕೆ ಸಂಬಂಧಿಸಿದ ಮಹತ್ವದ ಪ್ರಶ್ನೆಗಳಲ್ಲಿ ನಾವೆಲ್ಲ ಒಂದಾಗಬೇಕು'-ಎಂದರು)

ತಿರುಪತಿ ವೆಂಕಟೇಶನ ಪರವಾಗಿ.

ತಿರುಪತಿ ತಿರುವಲ ದೇವಸ್ಥಾನದ ಪರವಾಗಿ ಶ್ರೀ. ವಿ ಶೇಷಾದ್ರಿಗಳು, ದೇವರ ಸೊತ್ತುಗಳ ಮೇಲೆ ತೆರಿಗೆ ವಿಧಿಸಿದುದರ ವಿರುದ್ಧ ವಾದಿಸುತ್ತ, 'ದೇವರಿಗೆ ಮಾತನಾಡಲು ಬರುವುದಿಲ್ಲ. ಆದುದರಿಂದ ತೆರಿಗೆ ಹೆಚ್ಚಿಸಿದುದರ ಕುರಿತು ಆತನಿಷೇಧ ವ್ಯಕ್ತಪಡಿಸಲಾರ. ಅವನ ಪರವಾಗಿ ನಾನು ವಾದಿಸುತ್ತೇನೆ' ಎಂದು ಮುನ್ಸಿಪಲ್ ಕೌನ್ಸಿಲಿನ ಮುಂದೆ ವಿರೋಧ ಸೂಚನೆ ತಂದಿದ್ದರು. ಇದರ ಕುರಿತು ಕೌನ್ಸಿಲಿನಲ್ಲಿ ಚರ್ಚೆ ನಡೆದಾಗ ಕೌನ್ಸಿಲರರಲ್ಲಿ ಒಬ್ಬರಾದ ಶ್ರೀ. ಸಿ. ಭುಜಂಗರಾಯರು, 'ವೆಂಕಟೇಶ್ವರ ಸ್ವಾಮಿಗೆ ತುಂಬಾ ಸಂಪಾದನೆಯಿದೆ. ಆದುದರಿಂದ ಹೆಚ್ಚಿಗೆ ತೆರಲು ಆತ ಗೊಣಗುಟ್ಟಲಾರ' ಎಂದರು. ಚರ್ಚೆಯು ಕೊನೆಯಲ್ಲಿ ಹೆಚ್ಚಿಸಿದ ತೆರಿಗೆ ಕಾಯಂ ಮಾಡುವ ನಿರ್ಣಯವಾಯಿತು.

'ಭಾರತ'ಕ್ಕೆ ಪಾಕಿಸ್ತಾನದ ಮಾನ್ಯತೆ.

ಪಾಕಿಸ್ತಾನ ಪತ್ರಿಕೆಗಳು, ಹಿಂದೂಸ್ಥಾನಕ್ಕೆ 'ಇಂಡಿಯ' ಎಂಬ ಹೆಸರನ್ನು ಉಪೇಕ್ಷಿಸಿ ಅದರ ಬದಲು 'ಭಾರತ' ಎಂಬ ಹೆಸರನ್ನು ಅಂಗೀಕರಿಸಿವೆ. 'ಇಂಡಿಯ' ಎಂಬ ಹೆಸರಲ್ಲಿ ವಿಭಜನಾ ಪೂರ್ವ ಪಾಕಿಸ್ತಾನವೂ ಸೇರಿತ್ತು; ಇದೀಗ ವಿಭಜನೆಯಾಗಿ ಪಾಕಿಸ್ತಾನವು ಬೇರ್ಪಟ್ಟುದರಿಂದ ಉಳಿದ ಪ್ರದೇಶಕ್ಕೆ 'ಭಾರತ'ವೇ ಅಸ್ವೀಕಾರ್ಯವಾಯ, ತಾವು ಅದನ್ನು ಆದೇ ರೀತಿ ಸಂಬೋಧಿಸುವೆವು, ಹಿಂದೀಯರನ್ನು ಭಾರತೀಯರೆನ್ನುವೆವು ಎಂದು ಪಾಕಿಸ್ತಾನದ ಪ್ರಮುಖ ಪತ್ರಿಕೆಗಳಾದ 'ಡಾನ್' ಮತ್ತು 'ಸಿವಿಲ್ ಎಂಡ್ ಮಿಲಿಟರಿ ಗಜೆಟ್' ಇವು ಅಗ್ರಲೇಖನಗಳನ್ನು ಹೊರಡಿಸಿವೆ. ಪಾಕಿಸ್ತಾನದ ಪ್ರಧಾನ ಮಂತ್ರಿ ವಿಲಿಯಾಖತ್ ಅಲಿಖಾನರೂ ಇತ್ತೀಚೆಗೆ ಒಂದು ಹೇಳಿಕೆ ಸಮ್ಮೇಳನದಲ್ಲಿ ಇಂಡಿಯವನ್ನು 'ಭಾರತ'ವೆಂದೇ ಸಂಬೋಧಿಸಿದ್ದಾರೆ.

ಕೂಚ್ ಬಿಹಾರದೊಳಗೆ ಹೊಕ್ಕುವ ಯತ್ನ.

ಸುಮಾರು ೨೦೦೦ ಮಂದಿ ಮುಸ್ಲಿಮರು ನೆರೆಹೊರೆಯ ಪಾಕಿಸ್ತಾನಿ ಪ್ರದೇಶಗಳಿಂದ ಶಸ್ತ್ರ ಸಮೇತರಾಗಿ ಕೂಚ್ ಬಿಹಾರ್‌ದೊಳಗೆ ಪ್ರವೇಶಿಸಲು ಇತ್ತೀಚೆಗೆ ಯತ್ನ ನಡೆಸಿದ್ದರು. ಆದರೆ ಸಕಾಲದಲ್ಲಿ ಪೊಲೀಸ್ ಫೌಜು ಶಸ್ತ್ರಾಸ್ತ್ರಗಳ ಸಹಿತ ಆ ಕಡೆ ಧಾವಿಸಿದುದರಿಂದ ೨೫ ಮಂದಿ ಸಶಸ್ತ್ರ ಮುಸ್ಲಿಮರನ್ನು ದಸ್ತಗಿರಿ ಮಾಡಲಾಯಿತು. ಸಮೀಪದಲ್ಲೇ ಹರಿಯುವ ನದೀ ದಡದಲ್ಲಿರುವ ಒಂದು ಶಾಲೆಯಲ್ಲಿ ಹಲವು ಪ್ರಳಯಕಾರಿ ಆಸ್ತ್ರಗಳ ಪತ್ತೆ ಮಾಡಿಸಿಯೂಗಿದೆ.

ದಿ ಟ್ರೊಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:– ಲಾಲ ಶಂಕರ್ ಲಾಲ್.

ಮುಖ್ಯ ಖಜೇರಿ:– ಹೊಸ ಡೆಲ್ಲಿ.

ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್

ಹಕೀಮ್ ಅಜಮಲಖಾನ್. ಡಾ|| ಸರ್. ಎ. ಅನ್ಸಾರಿ.

Transacts:—Life, Fire, Motor and Marine.

ನಮ್ಮ ಹೊಸ ವಿಸ್ತಾರದ ಯೋಜನೆಯಲ್ಲಿ ಆಕರ್ಷಕ ಕಮೀಷನ್ ಮೇಲೆ ಏಜನ್ಸಿಗೆ ದಯವಿಟ್ಟು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಆರ್ಗನೈಜರ್
ದಕ್ಷಿಣ ಕೊಡಗು, ಪೊನ್ನಂಪೇಟೆ.
ಅಥವಾ
ಯಂ. ಯು. ಅಚ್ಚಣ್ಣಿ,
ಏಜೆನ್ಸಿ ಸುಪರಿಂಟೆಂಡೆಂಟ್,
ಮಡಿಕೇರಿ, ಕೊಡಗು.

ಆರ್ಗನೈಜರ್
ಉತ್ತರ ಕೊಡಗು, ಮಡಿಕೇರಿ.
ಅಥವಾ
ಎಂ. ಎ. ಬೆಳ್ಯಪ್ಪ,
ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮೊರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. ·32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245 ರವರೆಗೆ.
2. ·32 ರಿವಾಲ್ವರುಗಳು (Revolvers) ,, 262 ,, 274 ,,
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott) ಕ್ರಯ ರೂ. 1492/-
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make) ಕ್ರಯ ರೂ. 627–5–0
5. 6 ಗಜದ (Hand loom) ಕೈಮಗ್ಗದ ಸೀರೆಗಳು ಕ್ರಯ ರೂ. 4–10–0
6. 12, 16, 20ನೇ ನಂಬರು ಕೋವಿಗಳ ತೋಟಗಳೂ ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
52–30 ಗೌರವ ಕಾರ್ಯದರ್ಶಿ.

ಮತ್ತೊಂದು ಉಜ್ವಲ ವರ್ಷ.

1948ನೇ ವರ್ಷದ ವಾರ್ಷಿಕ ವರದಿಯ ಪ್ರಾಮುಖ್ಯಾಂಶಗಳು.

ಹೊಸ ಉದ್ಯಮ ರೂ. .... 6,13,00,000 ರೂ.ದಿ.
ಚಾಲ್ತಿಯಲ್ಲಿರುವ ಒಟ್ಟು ಉದ್ಯಮ ರೂ. .... 27,73,00,000 ,,
ಒಟ್ಟು ನಿಧಿ. ರೂ. .... 8,30,00,000 ,,
ಸಾ ಪತವಾದಂದಿನಿಂದ ಪಾವತಿಯಾದ ಕ್ಲೈಮುಗಳು 10,96,00,000 ,,
1,28,000 ಕ್ಕೆ ಮಿರಿದ ತೃಪ್ತಿ ಪಡೆದ ಪಾಲಿಸಿದಾರರು.

ಶಕ್ತಿ. ಸೇವೆ ಭದ್ರತೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಎಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ,—1897

ರೋಶನ್‌ಲಾಲ್, ಜನರಲ್ ಮೇನೇಜರ್.

ಪ್ರಧಾನ ಕಛೇರಿ:
ಎಂಪೈರ್ ಹೌಸ್, ಹಾರ್ನ್‌ಬಿ.
ರೋಡ್, ಫೋರ್ಟ್, ಬೊಂಬಾಯಿ.

ಅಂಗ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡರಸ್ತೆ, ಬೆಂಗಳೂರು.

CRESCENT

FOR PROTECTION AND SERVICE.

It is best to represent and insure with

The CRESCENT Insurance Co., Lt.d,

H: O: BOMBAY.] *[Established 1919.*

For particulars write to:

Sri B. A. Poovaiah *Organiser* *Pollibetta, Coorg.*

or

The Branch Manager, *22 B. Mahatma Gandhi Road, Bangalore 1.*

ಸುರಕ್ಷಿತವಾದ ಜೀವವಿಮೆ ಪಡೆಯಲು

ಕ್ರೆಸೆಂಟ್

ಇನ್ಶೂರೆನ್ಸ್ ಕಂಪೆನಿಗೆ ಬರೆಯಿರಿ.

ಭದ್ರತೆ! 17 ವರ್ಷಗಳ ರಿಜಿಸ್ಟ್ರ ಅನುಕೂಲತೆ !!
ಅನುಭವಶೀಲತೆ!!

ದಿ ವಿಜಯ ಬ್ಯಾಂಕ್ ಲಿಮಿಟೆಡ್

ಮುಖ್ಯ ಖಜೇರಿ,

ಕದ್ರಿ ರೋಡ್, ಮಂಗಳೂರು.

ನಿರಖು ಠೇವಣಾತಿ ಬಡ್ಡಿದರ:–

3	ತಿಂಗಳು	3%
6	,,	3½%
12	,,	3¾%
24	,,	4 %

ರೂಪಾಯಿ ೧೫,೦೦೦ಕ್ಕೆ ಮಿರಿದ ಒಂದೇ ಡಿಪಾಜಿಟ್ಟಿಗೆ ಮೇಲಿನ ದರಕ್ಕಿಂಥಾ ¼% ಹೆಚ್ಚಿಗೆ.

ಶಾಖೆಗಳು:– ಸಿಟಿ ಮಂಗಳೂರು, ಬೈಂದೂರು, ಕುಂದಾಪುರ, ಬ್ರಹ್ಮಾವರ, ಉಡುಪಿ, ಕಾಪು, ಕಾರ್ಕಳ, ಕಾಸರಗೋಡು, ಕಾಞಂಗಾಡ್, ಪುತ್ತೂರು, **ಮಡಿಕೇರಿ** ಮತ್ತು ಮುಂಬಾಯಿ.

ಒಟ್ಟು ವಹಿವಾಟು ಭಂಡವಾಳ ರೂ. ೪೦ ಲಕ್ಷಕ್ಕೂ ಮಿರಿದೆ.

ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳು ಅತೀ ಕಡಿಮೆ ದರದಲ್ಲಿ ದಕ್ಷತೆಯಿಂದ ನಡೆಸಲ್ಪಡುವವು.

ಹೆಚ್ಚಿನ ವಿವರಗಳಿಗೆ ಬರೆಯಿರಿ:– ಏಜಂಟ್,

ಮಡಿಕೇರಿ ಶಾಖೆ, ಮಡಿಕೇರಿ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ರಿಜಿಸ್ಟ್ರೇಷನ್ ಆಫ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,79,000.
ಕ್ಷೇಮನಿಧಿ	ರೂ.	53,000.
ಇತರ ನಿಧಿಗಳು	ರೂ.	28,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆಸಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾನ್ಜಿ.

ಶ್ರೀ ಟಿ. ಎನ್. ಗೋವಿಂದರಾಜು, "ಕೊಡಗು"
ಏಜಂಟರು, ವೀರಾಜಪೇಟೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.